# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

| | | | | | | | | |
|---|---|---|---|---|---|---|---|---|
| Volume: 01, | Issue: 294 | RNI Number : KNKAN/25/A2770 | 07-11-2026 | Saturday | Page 04, | Price 2/- | suddinimmuru@gmail.com | Mob:-8660146563 |
| ಸಂಪುಟ :01 | ಸಂಚಿಕೆ:294 | ರಾಯಚೂರು | 07-11-2026 | ಶನಿವಾರ | ಪುಟ 04 | ಬೆಲೆ ರೂ.2/- | Postal Reg Number:RCR/L/RNP/117/2026-28 | |


# ಕಲ್ಯಾಣ ಕರ್ನಾಟಕದ ಖಾಲಿ ಹುದ್ದೆಗಳನ್ನು ಕೆಪಿಎಸ್‌ಸಿ ಬದಲಿಗೆ ಕೆಇಎ ಮೂಲಕ ಭರ್ತಿ ಮಾಡಿ: ಸಚಿವ ಪ್ರಿಯಾಂಕ್ ಖರ್ಗೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹೊರಗಿರಿಸಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಆದ್ಯತೆ ಮೇರೆಗೆ ಭರ್ತಿ ಮಾಡಿಕೊಳ್ಳಬೇಕು ಎಂದು ಗೃಹ ಸಚಿವ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇಂದು ವಿಕಾಸಸೌಧದಲ್ಲಿ ನಡೆದ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿ ಹಾಗೂ ಸಂವಿಧಾನದ 371(ಜೆ) ವಿಧಿಯ ಅನುಷ್ಠಾನ ಕುರಿತ ಉಪಸಮಿತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಈ ಭಾಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ನ್ಯಾಯಯುತ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಸಂವಿಧಾನದ 371(ಜೆ) ವಿಧಿಯನ್ನು ಜಾರಿಗೆ ತರಲಾಗಿದೆ. ಈ ಮಹತ್ವದ ಸಂವಿಧಾನಾತ್ಮಕ ಆಶಯವನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಕಾಯ್ದೆಯ ಅನುಷ್ಠಾನದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಅಥವಾ ವಿಳಂಬ ಸಲ್ಲದು ಎಂದು ಎಚ್ಚರಿಸಿದರು.

ಸಂವಿಧಾನದತ್ತ ಹಕ್ಕು, ಭಿಕ್ಷೆಯಲ್ಲ: 371(ಜೆ) ಕಾಯ್ದೆಯು ಕಲ್ಯಾಣ ಕರ್ನಾಟಕದ ಜನರ ಅಭಿವೃದ್ಧಿ ಮತ್ತು ಹಕ್ಕುಗಳ ರಕ್ಷಣೆಗಾಗಿ ಸಾಕಷ್ಟು ಶ್ರಮ ವಹಿಸಿ ಜಾರಿಗೆ ತಂದಿರುವ ಮಹತ್ವದ ಸಂವಿಧಾನಾತ್ಮಕ ಕ್ರಮವಾಗಿದೆ. ಆದರೆ, ಈ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಒದಗಿಸುವ ವಿಚಾರದಲ್ಲಿ ಅಧಿಕಾರಿಗಳು ನಿರೀಕ್ಷಿತ ಗಂಭೀರತೆ ತೋರುತ್ತಿಲ್ಲ ಎಂಬುದು ಕಂಡುಬರುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕದ ಜನರು ಈ ಕಾಯ್ದೆಯಡಿ ಶಿಕ್ಷಣ, ಉದ್ಯೋಗ ಸೇರಿದಂತೆ ತಮಗೆ ದೊರೆಯಬೇಕಾದ ಸೌಲಭ್ಯಗಳನ್ನು ಅಧಿಕಾರಯುತವಾಗಿ ಕೇಳುತ್ತಿದ್ದಾರೆಯೇ ಹೊರತು ಯಾರ ಬಳಿಯೂ ಭಿಕ್ಷೆ ಬೇಡುತ್ತಿಲ್ಲ. ಇದು ಸಂವಿಧಾನವೇ ನೀಡಿರುವ ಅವರ ಹಕ್ಕು. ಹೀಗಾಗಿ, 371(ಜೆ) ವಿಧಿಯ ಅನುಷ್ಠಾನವನ್ನು ಅಧಿಕಾರಿಗಳು ಹಗುರವಾಗಿ ಪರಿಗಣಿಸಬಾರದು. ಕಾಯ್ದೆಯ ಆಶಯವನ್ನು ಸಂಪೂರ್ಣವಾಗಿ ಜಾರಿಗೊಳಿಸುವ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ಪ್ರಿಯಾಂಕ್ ಖರ್ಗೆ ಪ್ರತಿಪಾದಿಸಿದರು.

ಕಳೆದ ಸಭೆಯ ನಿರ್ದೇಶನಗಳ ಅನುಷ್ಠಾನಕ್ಕೆ ನಿರ್ಲಕ್ಷ್ಯವೇಕೆ?: ಹಿಂದಿನ ಸಭೆಯಲ್ಲಿ ಅಧಿಕಾರಿಗಳು ನೀಡಿದ್ದ ಅಂಕಿ-ಅಂಶಗಳಿಗೂ ಇಂದಿನ ಸಭೆಯಲ್ಲಿ ಸಲ್ಲಿಸಿರುವ ಮಾಹಿತಿಗೂ ಯಾವುದೇ ಗಮನಾರ್ಹ ವ್ಯತ್ಯಾಸ ಕಂಡುಬರುತ್ತಿಲ್ಲ. ಕಳೆದ ಸಭೆಯಲ್ಲಿ ಸ್ಪಷ್ಟವಾಗಿ ನೀಡಿದ್ದ ನಿರ್ದೇಶನಗಳ ಅನುಷ್ಠಾನದಲ್ಲಿ ಪ್ರಗತಿ




ಸಾಧಿಸದಿರುವುದು, ಅಧಿಕಾರಿಗಳು ಆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದನ್ನು ತೋರಿಸುತ್ತದೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ನೀಡುವ ನಿರ್ದೇಶನಗಳು ಕೇವಲ ದಾಖಲೆಗಳಿಗೆ ಸೀಮಿತವಾಗಬಾರದು. ಅವುಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ, ಮುಂದಿನ ಸಭೆಯಲ್ಲಿ ಸಾಧಿಸಿರುವ ಪ್ರಗತಿಯ ಸ್ಪಷ್ಟ ಅಂಕಿ-ಅಂಶಗಳನ್ನು ಸಲ್ಲಿಸಬೇಕು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ವೇಗ ನೀಡುವುದರ ಜೊತೆಗೆ, 371(ಜೆ) ಅಡಿಯಲ್ಲಿ ಈ ಭಾಗದ ಜನರಿಗೆ ದೊರೆಯಬೇಕಾದ ಸಾಂವಿಧಾನಿಕ ಸೌಲಭ್ಯಗಳು ಸಮರ್ಪಕವಾಗಿ ತಲುಪುವಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

# ಕೇಂದ್ರದಿಂದ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ವಿಶೇಷ ಅನುದಾನ ನೀಡುವಂತೆ ಒತ್ತಾಯಿಸಲು ಸಚಿವರ ಪ್ರಸ್ತಾವ

ಬೆಂಗಳೂರು, ನವೆಂಬರ್ 6 : ಸಂವಿಧಾನದ ಅನುಚ್ಛೇದ 371() ಅನುಷ್ಠಾನಕ್ಕೆ ಸಂಬಂಧಿಸಿದ ಸಚಿವ ಸಂಪುಟ ಉಪಸಮಿತಿಯ ಕಾರ್ಯವ್ಯಾಪ್ತಿಯನ್ನು ಕೇವಲ ಸೇವಾ ಜೇಷ್ಠತೆ ಮತ್ತು ಖಾಲಿ ಹುದ್ದೆಗಳ ವಿಚಾರಗಳಿಗೆ ಸೀಮಿತಗೊಳಿಸದೆ, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ, ಸಿಬ್ಬಂದಿ ಹಂಚಿಕೆ, ಇಲಾಖಾವಾರು ಅನುದಾನ ಹಾಗೂ ಶಿಕ್ಷಣಆರೋಗ್ಯ ಮೂಲಸೌಕರ್ಯದಲ್ಲಿನ ತಾರತಮ್ಯಗಳನ್ನೂ ಸಮಗ್ರವಾಗಿ ಪರಿಶೀಲಿಸಬೇಕು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಸಭೆಯಲ್ಲಿ ವಿಷಯ ಮಂಡಿಸಿದರು.



ಇಂದು ವಿಕಾಸಸೌಧದಲ್ಲಿ ನಡೆದ 371() ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಭಾಗವಹಿಸಿದ ಅವರು, ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿರುವ ಮೂಲ ಆಶಯವೇ ಪ್ರದೇಶದ ಸಮಗ್ರ ಅಭಿವೃದ್ಧಿ ಮತ್ತು ಸಮಾನ ಅವಕಾಶ ಕಲ್ಪಿಸುವುದಾಗಿದೆ. ಹೀಗಾಗಿ 371() ಅನುಷ್ಠಾನವನ್ನು ಸೇವಾ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಬಾರದು ಎಂದು ಪ್ರತಿಪಾದಿಸಿದರು.

ಜೇಷ್ಠತಾ ಪಟ್ಟಿಯ ನಿರ್ಣಯಗಳಿಗೆ ಕಾಲಮಿತಿಯಲ್ಲಿ ಅನುಷ್ಠಾನ

ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ 2023, 2024 ಮತ್ತು 2025ರಲ್ಲಿ ನಡೆದ ಸಭೆಗಳಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿದ್ದರೂ, ಅವುಗಳ ಅನುಷ್ಠಾನದಲ್ಲಿ ವಿಳಂಬವಾಗಿರುವ ವಿಷಯವೂ ಸಭೆಯಲ್ಲಿ ಚರ್ಚೆಗೆ ಬಂದಿತು.

ಈ ಹಿಂದಿನ ನಿರ್ಣಯಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ () ಹಾಗೂ ಸಂಬಂಧಿಸಿದ ಇಲಾಖೆಗಳು ನಿಗದಿತ ಕಾಲಮಿತಿಯೊಳಗೆ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ಸಭೆಯ ಅಧ್ಯಕ್ಷರು ಸೂಚಿಸಿದರು.

ಕೇಂದ್ರದಿಂದಲೂ ವಿಶೇಷ ಅನುದಾನಕ್ಕೆ ಒತ್ತಾಯ

ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಪ್ರತಿ

3ನೇ ಪುಟಕ್ಕೆ

# ನೂರ್ ಷಾ ದರ್ಗಾದ ವಕ್ಫ್ ಜಮೀನು ಟ್ರಸ್ಟ್‌ಗೆ ಅಕ್ರಮವಾಗಿ ಮಾರಟ-ಅಕ್ಬರ್ ನಾಗುಂಡಿ



ರಾಯಚೂರು, ನ.06-

ನಗರದ ಜಹೀರಾಬಾದ್ ಸರ್ಕಲ್ ನ ನೂರ್ ಷಾ ಖಾದ್ರಿ ದರ್ಗಾಕ್ಕೆ ಸೇರಿದ ವಕ್ಫ್ ಜಮೀನು ಸರ್ವೆ ನಂ.1209,1 ಎಕ್ಕರೆ 11 ಗುಂಟೆ ಜಮೀನು ಅಲ್ ಕರೀಮ್ ಟ್ರಸ್ಟ್ ಗೆ ಅಕ್ರಮ ದಾಖಲೆಗಳು ಸೃಷ್ಟಿಸಿ ಕೆಲವರು ಮಾರಾಟ ಮಾಡಿದ್ದಾರೆಂದು ವಕ್ಫ್ ಆಸ್ತಿ ರಕ್ಷಣ ಸಮಿತಿ ಮುಖಂಡ ಅಕ್ಬರ್ ನಾಗುಂಡಿ ಆರೋಪಿಸಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,ಈ ಜಮೀನನಲ್ಲಿ ಮಸೀದಿ ಹಾಗೂ ಮದರಸ ನಡೆಯುತ್ತಿದೆ. ಈ ಜಮೀನು ವಕ್ಫ್ ಮಂಡಳಿಗೆ ಸೇರಿದ್ದು.ಸರ್ಕಾರದ ಗಜೆಟ್ ನಲ್ಲಿ ವಕ್ಫ್ ಆಸ್ತಿಯೆಂದು ನಮೋದಿಸಲಾಗಿದೆ.ವಕ್ಫ್ ಆಸ್ತಿ ರಕ್ಷಣೆ ಮಾಡಬೇಕಾದ ಜಿಲ್ಲಾ ವಕ್ಫ್ ಅಧಿಕಾರಿ ಕೈ ಕಟ್ಟಿ ಕುಳಿತುಕೊಂಡಿದ್ದಾರೆ. ಈ ಜಮೀನು ನೋಂದಣಿಯನ್ನು ಸಿರವಾರ ನೋಂದಾಣಿ ಕಛೇರಿಯಲ್ಲಿ ಮಾಡಲಾಗಿದೆ. ತಕ್ಷಣ ಈ ನೋಂದಾಣಿಯನ್ನು ರದ್ದುಗೊಳಿಸಿ ಈ ಜಮೀನು ವಕ್ಫ್ ಮಂಡಳಿಗೆ ಮರಳಿ ನೀಡಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಂದು ಒತ್ತಾಯಿಸಿದರು.

ಸುಳ್ಳು ದಾಖಲೆ ಸೃಷ್ಟಿಸಿ ವಕ್ಫ್ ಜಮೀನು ಮಾರಾಟ ಮಾಡಿದವರ ಮೇಲೆ ಹಾಗೂ ಖರೀದಿಸಿದ ಟ್ರಸ್ಟ್ ಅವರ ಮೇಲೆ ಕಾನೂಕ್ರಮ ಕೈಗೊಂಡು ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುರಶೇದ್ ಜಾನಿ ಸಾಹೇಬ್,ಗುಲಾಮ್ ಬೇಗ್,ಸೈಯದ್ ಸಮೀರ್ ಹುಸೇನ್,ಮಂಸೂರ್ ಬೇಗ್ ಉಪಸ್ಥಿತರಿದ್ದರು.

# ಭೂ ಪರಿವರ್ತನೆ ಕಚೇರಿ ಶಿರಸ್ತೆದಾರರ ವಿರುದ್ಧ ಕ್ರಮಕ್ಕೆ ಒತ್ತಾಯ

ರಾಯಚೂರು, ನ.06-ಭೂ ಪರಿವರ್ತನೆ ಕಚೇರಿ ಶಿರಸ್ತೆದಾರ ಅವಿನಾಶ ಉರುಫ್ ಯೋಗೇಶ್ ಅವರು ಪ್ರತಿ ಎಕರೆಗೆ ಕಡತ ಮಂಡಿಸಲು 20 ಸಾವಿರ ಲಂಚ ಬೇಡಿಕೆ ಇಡುತ್ತಿರುವ ಕುರಿತು ಸೂಕ್ತ ತನಿಖೆ ನಡೆಸಿ, ತನಿಖೆ ಪೂರ್ಣಗೊಳಿಸುವವರೆಗೂ ಅವರನ್ನು ಶಾಖೆಯ ಕೆಲಸದಿಂದ ವರ್ಗಾವಣೆ ಮಾಡಬೇಕು ಎಂದು ದಲಿತ ಸೇನೆ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.



ಶಾಖೆಯ ಶಿರಸ್ತೆದಾರರಾದಅವಿನಾಶ ಉರುಫ್ ಯೋಗೇಶ್ ಅವರು ಕಡತವನ್ನು ಮುಂದಿನ ಹಂತಕ್ಕೆ ಮಂಡಿಸಲು ಪ್ರತಿ ಎಕರೆಗೆ ರೂ. 10 ಸಾವಿರ ರಿಂದ 20, ಸಾವಿರ ವರೆಗೆ ಹಣ ನೀಡಬೇಕೆಂದು ಬೇಡಿಕೆ ಇಡುತ್ತಿರುವುದು ಹಾಗೂ ತನ್ನ ಮೇಲಾಧಿಕಾರಿಗಳಿಗೆ ಹಣ ನೀಡುತ್ತೇನೆಂದು ಹೇಳಿಕೆ ನೀಡುತ್ತಿರುವುದು ಸಾರ್ವಜನಿಕವಾಗಿ ವ್ಯಾಪಕವಾಗಿ ಕೇಳಿಬರುತ್ತಿದೆ.

ಹಾಗಾಗಿ ಇದರ ಫಲಾನುಭವಿಗಳಿಗೆ ಹಣದ ಬೇಡಿಕೆ ಇಡಲಾಗುತ್ತಿದೆ ಎಂಬ ಮಾಹಿತಿ ಅನ್ವಯ ತಾವುಗಳು ಖುದ್ದಾಗಿ ಫಲಾನುಭವಿಗಳ ತನಿಖೆ ಮಾಡಿ ಖಚಿತಪಡಿಸಲು ಕ್ರಮ ಕೈಗೊಳ್ಳಲು ಒಂದು ತನಿಖೆ ತಂಡ ರಚಿಸಬೇಕು

ಸರ್ಕಾರದ ನಿಗದಿತ ಶುಲ್ಕವನ್ನು ಹೊರತುಪಡಿಸಿ ಇಂತಹ ಹೆಚ್ಚುವರಿ ಹಣದ ಬೇಡಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದ ರೈತರು ಮತ್ತು ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.ಕಡತಗಳು ಅನಗತ್ಯವಾಗಿ

3ನೇ ಪುಟಕ್ಕೆ

# ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ರದ್ದತಿ ಖಂಡಿಸಿ ಪ್ರತಿಭಟನೆ: 15 ಬೇಡಿಕೆಗಳ ಈಡೇರಿಕೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಒತ್ತಾಯ

ರಾಯಚೂರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಿ ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಕೂಡಲೇ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು ಹಾಗೂ ಹೆಚ್ಚುವರಿ ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಿ ಕಾನೂನುಬದ್ಧ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಶುಕ್ರವಾರ ಪ್ರತಿಭಟನಾ ಧರಣಿ ನಡೆಸಲಾಯಿತು.




ಮೀಸಲಾತಿ ರಕ್ಷಣೆ ಹಾಗೂ ದಲಿತ ಸಮುದಾಯಗಳ ಸಾಂವಿಧಾನಿಕ ಹಕ್ಕುಗಳ ಸಂರಕ್ಷಣೆಗಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವ ಮೂಲಕ ಸರ್ಕಾರದ ಗಮನ ಸೆಳೆಯಲಾಯಿತು.

ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿ ಆಧರಿಸಿ ಪರಿಶಿಷ್ಟ ಜಾತಿಯ 101 ಜಾತಿಗಳಿಗೆ ಇದ್ದ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡದ 51 ಜಾತಿಗಳಿಗೆ ಇದ್ದ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿತ್ತು. ಇದರಿಂದ ಒಟ್ಟು ಮೀಸಲಾತಿ ಪ್ರಮಾಣ ಶೇ.50ರಿಂದ ಶೇ.56ಕ್ಕೆ ಏರಿಕೆಯಾಗಿತ್ತು. ಆದರೆ, ಈ ಮೀಸಲಾತಿ ಹೆಚ್ಚಳದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿರುವುದು ಸಾಮಾಜಿಕ ನ್ಯಾಯದ ಹೋರಾಟಕ್ಕೆ ಹಿನ್ನಡೆಯಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಹೈಕೋರ್ಟ್ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ತಕ್ಷಣ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಬೇಕು. ಸರ್ವಪಕ್ಷಗಳ ನಿಯೋಗದೊಂದಿಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ

3ನೇ ಪುಟಕ್ಕೆ

# ಹಳ್ಳಿ ಜನರನ್ನು ಗುಗ್ಗು, ವಿಲೇಜ್ ಈಡಿಯಟ್ಸ್ ಎಂದು ಅವಮಾನಿಸಿದ ಪ್ರಿಯಾಂಕ್ ಖರ್ಗೆ ಬೇಷರತ್ ಕ್ಷಮೆಯಾಚಿಸಲಿ: ಜೆಡಿಎಸ್ ಆಗ್ರಹ

ರಾಯಚೂರು: ಹಳ್ಳಿ ಜನರನ್ನು ಗುಗ್ಗು ಮತ್ತು ವಿಲೇಜ್ ಈಡಿಯಟ್ಸ್ ಎಂದು ಹೇಳುವ ಮೂಲಕ ಅವಮಾನಿಸಿದ್ದಾರೆ ಎಂದು ಆರೋಪಿಸಿ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೇಷರತ್ ಕ್ಷಮೆಯಾಚಿಸಬೇಕು ಹಾಗೂ ರಾಜ್ಯ ಸರ್ಕಾರ ಬಸ್ ಪ್ರಯಾಣ ದರ ಮತ್ತು ಹಾಲಿನ ದರ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಜಿಲ್ಲಾ ಜನತಾದಳ (ಜಾತ್ಯತೀತ) ಘಟಕದ ವತಿಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.



ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ನಾವು ಹಳ್ಳಿ ಗುಗ್ಗುಗಳು ಏನಿವಾಗ? ಎಂಬ ಘೋಷಣೆಯೊಂದಿಗೆ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ, ರಾಜ್ಯದ ಬಹುಪಾಲು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಕೃಷಿ ಹಾಗೂ ಗ್ರಾಮೀಣ ಬದುಕಿನೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ. ಇಂತಹ ಸಂದರ್ಭದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಟೀಕಿಸುವ ಭರದಲ್ಲಿ ಹಳ್ಳಿಗರನ್ನು ಗುಗ್ಗು ಮತ್ತು ವಿಲೇಜ್ ಈಡಿಯಟ್ಸ್ ಎಂದು ಕರೆದಿರುವುದು ಗ್ರಾಮೀಣ ಜನರ ಭಾವನೆಗಳಿಗೆ ಧಕ್ಕೆ ತಂದಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಇಂತಹ ಹೇಳಿಕೆ ನೀಡುವುದು ಸರಿಯಲ್ಲ. ಕೂಡಲೇ ಬೇಷರತ್ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಲಾಗಿದೆ.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಗ್ರಾಮೀಣ ಹಿನ್ನೆಲೆಯಿಂದ ಬಂದವರಾಗಿದ್ದು, ರೈತರ ಪರವಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ರೈತರ

3ನೇ ಪುಟಕ್ಕೆ

# ತಿಡಿಗೋಳ ಗಲಾಟೆ ಪ್ರಕರಣ: ದಲಿತರ ಮೇಲೆ ದೌರ್ಜನ್ಯ, ಸಾಮಾಜಿಕ ಬಹಿಷ್ಕಾರ ನಡೆದಿಲ್ಲ-ಅಮರೇಶ

ಸಂಜೆಜ್ವಾಲೆ

ರಾಯಚೂರು, ನ.06-

ತಿಡಿಗೋಳ ಅಂಜನೇಯ ಜಾತ್ರೆಯಲ್ಲಿ ಸವರ್ಣಿಯರು ಮತ್ತು ದಲಿತರ ಮೇಲೆ ಗಲಾಟೆ ಪ್ರಕರಣಕ್ಕೆ ಸಂಬಂಧ ದಲಿತರ ಮೇಲೆ ಯಾವುದೇ ರೀತಿ ದೌರ್ಜನ್ಯ ಹಾಗೂ ಸಾಮಾಜಿಕ ಬಹಿಸ್ಕಾರ ನಡೆದಿಲ್ಲ ಎಂದು ತಿಡಿಗೋಳ ಗ್ರಾಮಸ್ಥರ ಪರವಾಗಿ ಅಮರೇಶ ಗಚ್ಚಿನಮನೆ ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,ತಿಡಿಗೋಳ ಗ್ರಾಮದಲ್ಲಿ ಸುಮಾರು 700ಜನ ಯಾವುದೇ ಜಾತಿ,ಧರ್ಮ ಬೇದ ಭಾವ ವಿಲ್ಲದೇ ದಿ.16ರಂದು ಕೇಗಲ್ ಗ್ರಾಮಕ್ಕೆ ಹೋಗಿ ಸ್ನಾನ ಮಾಡಿ ಪೂಜೆ ಮಾಡಿ ಪ್ರಸಾದ ಸ್ವೀಕರಿಸಿ ಪುನಃ ಗ್ರಾಮಕ್ಕೆ ಬಂದಿದ್ದಾರೆ. ನಂತರ ಉಚ್ಚಾಯ ಮತ್ತು ರಥೋತ್ಸವ ದಲ್ಲಿಯೂ ಎಲ್ಲಾ ಜಾತಿ,ಧರ್ಮದವರು ಭಾಗವಹಿಸಿದ್ದಾರೆ. ರವಿವಾರದಂದು ಎಲ್ಲಾ ಜಾತಿ,ಧರ್ಮದವರು ಗಂಡು,ಹೆಣ್ಣು ಎರಡು ಸಾಲಿನಲ್ಲಿ ನಿಂತು ಜಾತಿ,ಧರ್ಮ ಬೇಧಭಾವವಿಲ್ಲದೇ ಮಹಾಪ್ರಸಾದ ಸ್ವೀಕರಿಸಿದ್ದಾರೆ.ರೈತರ ಸಭೆ ಸಹ ನಡೆದಿದೆ. ಆಗ ಯಾವುದೇ ಜಗಳ,ಗಲಾಟಗಳು ನಡೆದಿಲ್ಲ, ಆದರೆ ಕೊನೆಯಲ್ಲಿ ಬ್ಯಾಡ್ ಬಾರಿಸುವಾಗ ಕೆಲ ಯುವಕರು ಸಾಕು ಸಮಯವಾಗಿದೆ ಎಂದು ಹೇಳಿದ್ದಾರೆ. ಆದರೆ ಕೆಲ ಯುವಕರನ್ನು ಇನ್ನು ಬಾರಸುವಂತೆ ಪಟ್ಟು ಹಿಡಿದ ಹಿನ್ನಲೆಯಲ್ಲಿ ಯುವಕರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಆಗ ಎರಡು ಸಮುದಾಯದ ಹಿರಿಯರು ಮಧ್ಯ ಪ್ರವೇಶ ಮಾಡಿ ಗಲಾಟೆಯನ್ನು ತಡೆದಿದ್ದಾರೆ. ನಂತರ ಕೆಲ ಮನೆಗಳ ಬಳಿ ಹೋಗಿ ಕೆಲ ಯುವಕರು ಗಲಾಟೆ ಮಾಡಲು ಮುಂದಾದಗ

3ನೇ ಪುಟಕ್ಕೆ

# ಸ್ಥಳೀಯ ಜ್ಞಾನ, ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ ಅಗತ್ಯ: ಶಿವಾನಂದ ಕಳವೆ

ಕಲಬುರಗಿ :

ಆಧುನಿಕ ತಂತ್ರಜ್ಞಾನ ಮತ್ತು ಅಭಿವೃದ್ಧಿಯ ಜೊತೆಗೆ ನಮ್ಮ ನಾಡಿನ ನೈಸರ್ಗಿಕ ಸಂಪನ್ಮೂಲ, ಗ್ರಾಮೀಣ ಸಂಸ್ಕೃತಿ, ಸ್ಥಳೀಯ ಜ್ಞಾನ ಹಾಗೂ ಪರಂಪರೆಯನ್ನು ಸಂರಕ್ಷಿಸುವುದು ಅಗತ್ಯ. ನಮ್ಮ ಹಳ್ಳಿಗಳ ಬೇರುಗಳನ್ನು ಅರಿಯದೆ ಅಭಿವೃದ್ಧಿಯತ್ತ ಸಾಗುವುದು ಸೂಕ್ತವಲ್ಲ ಎಂದು ಹಿರಿಯ ಪತ್ರಕರ್ತ ಹಾಗೂ ಪರಿಸರ ತಜ್ಞ ಶಿವಾನಂದ ಕಳವೆ ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ರಾಜ್ಯೋತ್ಸವ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಅಭ್ಯುದಯ-2026 ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ವಿಶೇಷ ಉಪನ್ಯಾಸ ನೀಡಿದರು.

ನೀರು ಮತ್ತು ಪರಿಸರವೇ ಆರೋಗ್ಯದ ಗುಟ್ಟು. ಗ್ರಾಮೀಣ ಜನಪದ ಜೀವನದಲ್ಲಿ ಅಪಾರ ವಿಜ್ಞಾನ ಮತ್ತು ಜ್ಞಾನ ಅಡಗಿದೆ. ನಮ್ಮ ಹಿರಿಯರು ಅನುಭವದ ಮೂಲಕ ರೂಪಿಸಿದ ಕೆರೆಕಟ್ಟೆಗಳು, ಜಲಸಂರಕ್ಷಣಾ ವ್ಯವಸ್ಥೆಗಳು ಹಾಗೂ ವಾಸ್ತುಶಿಲ್ಪ ಇಂದಿನ ಎಂಜಿನಿಯರಿಂಗ್ ಜ್ಞಾನಕ್ಕೂ ಸವಾಲಾಗಿವೆ. ಆಧುನಿಕ ಸೌಲಭ್ಯಗಳಿಂದ ನಾವು ಬೆಳೆದಿದ್ದರೂ ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ವಿಷಾದಿಸಿದರು.



ರಾಜ್ಯದಲ್ಲಿ ಬರಗಾಲದ ತೀವ್ರತೆ ಹೆಚ್ಚುತ್ತಿದ್ದು, ಲಕ್ಷಾಂತರ ಕೊಳವೆಬಾವಿಗಳು ಬತ್ತಿಹೋಗಿರುವುದು ಆತಂಕಕಾರಿ ಸಂಗತಿಯಾಗಿದೆ. ಇಂತಹ ಸಂದರ್ಭದಲ್ಲಿ ಸಾಂಪ್ರದಾಯಿಕ ಕೃಷಿ ಜ್ಞಾನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಏಕಬೆಳೆ ಪದ್ಧತಿಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆಯೂ ಎಚ್ಚರಿಕೆ ವಹಿಸಬೇಕು ಎಂದರು.

ನಮ್ಮ ನಾಡು, ಕಾಡು, ನದಿ ಮತ್ತು ನೀರನ್ನು ಉಳಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರೊಂದಿಗೆ ಸ್ಥಳೀಯ ಇತಿಹಾಸ, ಸಂಸ್ಕೃತಿ ಮತ್ತು ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಕನ್ನಡ ಪುಸ್ತಕ ಹಾಗೂ ಸಾಹಿತ್ಯವನ್ನು ಓದುವ ಮೂಲಕ ಮರೆತು ಹೋಗುತ್ತಿರುವ ಕನ್ನಡದ ಪದಗಳು ಮತ್ತು ಭಾಷೆಯ ಸೊಗಡನ್ನು ಜೀವಂತವಾಗಿಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿಯುಕೆ ಕುಲಪತಿ ಪ್ರೊ. ಬಟ್ಟುಸತ್ಯನಾರಾಯಣ ಮಾತನಾಡಿ, ಕರ್ನಾಟಕದ ಏಕೀಕರಣಕ್ಕಾಗಿ ನಡೆದ ಹೋರಾಟಗಳು ಹಾಗೂ ಹೋರಾಟಗಾರರ ತ್ಯಾಗ ಮತ್ತು ಪರಿಶ್ರಮದ ಇತಿಹಾಸವನ್ನು ಯುವಜನತೆ ತಿಳಿದುಕೊಳ್ಳಬೇಕು ಎಂದರು.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು. ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಜೊತೆಗೆ ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಆದ್ಯತೆ ನೀಡಬೇಕು. ಈ ಭಾಗದ ಹಿಂದುಳಿದ ಕ್ಷೇತ್ರಗಳ ಕುರಿತು ವಿಶ್ವವಿದ್ಯಾಲಯಗಳ ಪ್ರಾಧ್ಯಾ ಪಕರು ಮತ್ತು ವಿದ್ಯಾರ್ಥಿಗಳು ಅಧ್ಯಯನ ನಡೆಸಿ, ಸಮಗ್ರ ವರದಿಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಬೇಕು. ಈ ವರದಿಗಳು ಸರ್ಕಾರದ ನೀತಿ ಮತ್ತು ಯೋಜನೆಗಳ ರೂಪಿಸುವಿಕೆಗೆ ಆಧಾರವಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಎತ್ತಿನ ಗಾಡಿಯಲ್ಲಿ ತಾಯಿ ಭುವನೇಶ್ವರಿಯ ಭವ್ಯ ಮೆರವಣಿಗೆ, ಡೊಳ್ಳು ಕುಣಿತ, ವಿವಿಧ ಕಲಾತಂಡಗಳ ನೃತ್ಯ ಪ್ರದರ್ಶನ ಹಾಗೂ ನೂರಾರು ಮೀಟರ್ ಉದ್ದದ ಕನ್ನಡ ಧ್ವಜದೊಂದಿಗೆ ಶೋಭಾಯಾತ್ರೆ ನಡೆಯಿತು. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕನ್ನಡಾಭಿಮಾನದಿಂದ ಪಾಲ್ಗೊಂಡರು.

ಪ್ರಭಾರ ಕುಲಸಚಿವ ಪ್ರೊ. ಚನ್ನವೀರ ಆರ್.ಎಂ., ಕಾನೂನು ಅಧ್ಯಯನ ವಿಭಾಗದ ಡೀನ್ ಹಾಗೂ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ. ಬಸವರಾಜ ಎಂ. ಕುಬಕಡ್ಡಿ ಮಾತನಾಡಿದರು. ಕಾರ್ಯಕ್ರಮ ಸಂಯೋಜಕ ಡಾ. ಗಣಪತಿ ಬಿ. ಸಿನ್ನೂರು ಉಪಸ್ಥಿತರಿದ್ದರು. ಸ್ನಾತಕೋತ್ತರ ವಿದ್ಯಾರ್ಥಿನಿ ಲೀನಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಪಾಂಡುರಂಗ ಪತ್ತಿ ವಂದಿಸಿದರು. ಮುತ್ತಣ್ಣ ನಿರೂಪಿಸಿದರು. ರಾಜ್ಯೋತ್ಸವದ ಅಂಗವಾಗಿ ನಡೆದ ಕ್ರೀಡಾಕೂಟ, ಭಾಷಣ, ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲೆ ವಿಭಾಗದ ವಿದ್ಯಾರ್ಥಿಗಳು ವಂದೇ ಮಾತರಂ, ಕನ್ನಡ ನಾಡಗೀತೆ ಹಾಗೂ ರಾಷ್ಟ್ರಗೀತೆಯನ್ನು ಪ್ರಸ್ತುತಪಡಿಸಿದರು. ವಿವಿಧ ವಿಭಾಗಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ: ಡಿಸಿ ಇಕ್ರಂ ಶರೀಫ್

ಕಲಬುರಗಿ:

ನಗರದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವ ಉದ್ದೇಶದಿಂದ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅವರ ನೇತೃತ್ವದಲ್ಲಿ ಗುರುವಾರ ನಗರದ ವಿವಿಧ ಐತಿಹಾಸಿಕ ಸ್ಮಾರಕಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಲಾಯಿತು.

ಗುರುವಾರ ಬೆಳಗ್ಗೆ 11 ಗಂಟೆಗೆ ಆರಂಭವಾದ ಪರಿಶೀಲನಾ ಕಾರ್ಯದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ತಂಡವು ನಗರದ ಐತಿಹಾಸಿಕ ಜುನ್ಯೆದಿ ದರ್ಗಾ, ಬಸವೇಶ್ವರ ಕಾಲನಿ ಸಮೀಪದ ಗುಬ್ಬಿ ಕಾಲನಿಯಲ್ಲಿರುವ ಅನಾಮಧೇಯ ಐತಿಹಾಸಿಕ ಸ್ಮಾರಕ ಹಾಗೂ ರೋಜಾ ಪ್ರದೇಶದಲ್ಲಿರುವ ಕಮಾಲೆ ಮುಜಾಹಿದ್ದೀನ್ ದರ್ಗಾಗಳಿಗೆ ಭೇಟಿ ನೀಡಿ, ಅವುಗಳ ಐತಿಹಾಸಿಕ ಮಹತ್ವ ಮತ್ತು ಪ್ರಸ್ತುತ ಸ್ಥಿತಿಗತಿಗಳನ್ನು ಪರಿಶೀಲಿಸಿತು.

ಈ ಸಂದರ್ಭದಲ್ಲಿ ಕಲಬುರಗಿ ನಗರದ ಬಹಮನಿ ಕಾಲದ ಐತಿಹಾಸಿಕ ಸ್ಮಾರಕಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಲಾಯಿತು. ಸ್ಮಾರಕಗಳ ಸಂರಕ್ಷಣೆ, ಸ್ವಚ್ಛತೆ, ಪ್ರವಾಸಿಗರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು, ಮಾಹಿತಿ ಫಲಕಗಳನ್ನು ಅಳವಡಿಸುವುದು ಸೇರಿದಂತೆ ಪ್ರವಾಸಿಗರಿಗೆ ಅನುಕೂಲವಾಗುವ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಕುರಿತು ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಆಳಂದ ಚೆಕ್‌ಪೋಸ್ಟ್‌ನಲ್ಲಿರುವ ಬಾಲಮಂದಿರ ಹಾಗೂ ಸಖಿ ಒನ್ ಸ್ಟಾಪ್ ಸೆಂಟರ್‌ಗೂ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಮತ್ತು ಕಾರ್ಯನಿರ್ವಹಣೆಯನ್ನು ಪರಿಶೀಲಿಸಿದರು.

ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಕಲಬುರಗಿ ನಗರದ ತಹಶೀಲ್ದಾರ್ ಆನಂದ್ ಶೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ್ ರಾಠೋಡ್, ಪುರಾತತ್ವ ಇಲಾಖೆಯ ಅಧಿಕಾರಿ ಡಾ. ರಾಜಾರಾಮ್, ಇತಿಹಾಸ ಸಂಶೋಧಕ ಡಾ. ಶಂಭುಲಿಂಗ ಎಸ್. ವಾಣಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಿ.12ರಂದು ರಾಷ್ಟ್ರೀಯ ಲೋಕ ಅದಾಲತ್; ಬಾಕಿ ಟ್ರಾಫಿಕ್ ಚಲನ್‌ಗಳಿಗೆ ಶೇ.50ರಷ್ಟು ರಿಯಾಯಿತಿ : ನ್ಯಾ.ಶ್ರೀಕಾಂತ್ ಕುರಣೆ



ಹುಮನಾಬಾದ್:

ಈ ವರ್ಷದ ನಾಲ್ಕನೇ ಹಾಗೂ ಕೊನೆಯ ರಾಷ್ಟ್ರೀಯ ಲೋಕ ಅದಾಲತ್ ಡಿಸೆಂಬರ್ 12ರಂದು ರಾಜ್ಯಾದ್ಯಂತ ನಡೆಯಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ಹಾಗೂ ಸಿವಿಲ್ ನ್ಯಾಯಾಧೀಶ ಶ್ರೀಕಾಂತ್ ಕುರಣೆ ಮನವಿ ಮಾಡಿದರು.

ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಮನವಿಯ ಮೇರೆಗೆ ಕರ್ನಾಟಕ ಸರ್ಕಾರವು ಬಾಕಿ ಇರುವ ಟ್ರಾಫಿಕ್ ಚಲನ್ ಪ್ರಕರಣಗಳಿಗೆ ಶೇ. 50ರಷ್ಟು ರಿಯಾಯಿತಿ ಘೋಷಿಸಿದೆ. ಸಾರ್ವಜನಿಕರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು. 1991ರಿಂದ 2025ರವರೆಗೆ ಬಾಕಿ ಉಳಿದಿರುವ ಲಕ್ಷಾಂತರ ಟ್ರಾಫಿಕ್ ಚಲನ್ ಪ್ರಕರಣಗಳಿಗೆ ದಂಡ ಪಾವತಿಸದ ಕಾರಣ ಇತ್ಯರ್ಥವಾಗದೆ ಉಳಿದಿವೆ. ಇಂತಹ ಪ್ರಕರಣಗಳಿಗೆ ಸರ್ಕಾರ ಶೇ. 50ರಷ್ಟು ರಿಯಾಯಿತಿ ಘೋಷಿಸಿದೆ. ಅರ್ಧದಷ್ಟು ದಂಡ ಪಾವತಿಸಿದರೆ ಪ್ರಕರಣ ಇತ್ಯರ್ಥವಾಗಲಿದೆ. ಈ ರಿಯಾಯಿತಿ ಅವಕಾಶ ನವೆಂಬರ್ 21ರಿಂದ ಡಿಸೆಂಬರ್ 11ರವರೆಗೆ ಇರಲಿದೆ. ವಾಹನ ಸವಾರರು ಸಂಬಂಧಪಟ್ಟ ಪೊಲೀಸ್ ಠಾಣೆ, ನ್ಯಾಯಾಲಯ ಅಥವಾ ಕರ್ನಾಟಕ ಒನ್ ವೆಬ್‌ಸೈಟ್ ಮೂಲಕ ನೇರವಾಗಿ ದಂಡ ಪಾವತಿಸಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಎನ್‌ಐ ಆಕ್ಟ್‌ನಡಿ ದಾಖಲಾಗಿರುವ ಚೆಕ್ ಬೌನ್ಸ್ ಪ್ರಕರಣಗಳು, ಹಣ ವಸೂಲಾತಿ, ಕಾರ್ಮಿಕ ವಿವಾದ, ಕೆಇಬಿ ಮತ್ತು ನೀರಿನ ಬಿಲ್ ಪ್ರಕರಣಗಳು, ಜೀವನಾಂಶ, ವೈವಾಹಿಕ ಪ್ರಕರಣಗಳು, ಬ್ಯಾಂಕ್ ವ್ಯಾಜ್ಯಗಳು, ಅಪಘಾತ ಪರಿಹಾರ, ಸಂಚಾರಿ ಪ್ರಕರಣಗಳು, ಭೂಸ್ವಾಧೀನ, ಪಿಂಚಣಿ, ಸೇವಾ ವಿಷಯಗಳು, ಕಂದಾಯ ವ್ಯಾಜ್ಯಗಳು ಸೇರಿದಂತೆ ರಾಜಿ ಮಾಡಿಕೊಳ್ಳಬಹುದಾದ ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ ಎರಡೂ ಪಕ್ಷಗಳಿಗೆ ಸಮಯ ಮತ್ತು ಹಣ ಉಳಿತಾಯವಾಗುತ್ತದೆ. ನ್ಯಾಯಾಲಯದ ಸಮಯವೂ ಉಳಿಯುವುದರ ಜೊತೆಗೆ ಸಂಬಂಧಗಳು ಸುಧಾರಿಸಲು ಸಹಕಾರಿಯಾಗುತ್ತದೆ. ಈ ಕಾರ್ಯಕ್ಕೆ ವಕೀಲರ ಸಂಘದಿಂದಲೂ ಸಂಪೂರ್ಣ ಸಹಕಾರ ದೊರೆಯುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಗಾಯತ್ರಿ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಸಂತೋಷ್ ಬಿ. ಉಪಸ್ಥಿತರಿದ್ದರು.

# ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಇಂಡಿಯಾ ಮೈತ್ರಿಕೂಟದಿಂದ ಪ್ರತಿಭಟನೆ

ಬೀದರ್,

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ರದ್ದುಗೊಳಿಸುವುದು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಸೇರಿದಂತೆ ನಾಲ್ಕು ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇಂಡಿಯಾ ಮೈತ್ರಿಕೂಟದ ವತಿಯಿಂದ ಗುರುವಾರ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಮನ್ನಾನ್ ಸೇಠ್, ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ಹಾಗೂ ಪಾರದರ್ಶಕತೆ ಇಲ್ಲದೆ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಎಸ್‌ಐಆರ್ ಪ್ರಕ್ರಿಯೆಯು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದು, ಇದರ ಮೂಲಕ ದೇಶದ ಕೋಟ್ಯಂತರ ಜನರ ಮತದಾನದ ಹಕ್ಕನ್ನು ಕಸಿಯುವ ಹುನ್ನಾರ ನಡೆದಿದೆ. ಆದ್ದರಿಂದ ಈ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.




ಎಸ್‌ಐಆರ್ ರದ್ದುಗೊಳಿಸುವುದರ ಜತೆಗೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆಗೆ ತಿದ್ದುಪಡಿ ತರಬೇಕು. ಈ ಹಿಂದೆ ಮುಖ್ಯ ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಪ್ರಧಾನ ಮಂತ್ರಿ, ಪ್ರತಿಪಕ್ಷದ ನಾಯಕ ಹಾಗೂ ಭಾರತದ ಮುಖ್ಯ ನ್ಯಾಯಮೂರ್ತಿ ಸದಸ್ಯರಾಗಿದ್ದರು. ಆದರೆ ಈಗಿನ ವ್ಯವಸ್ಥೆಯಲ್ಲಿ ಮುಖ್ಯ ನ್ಯಾಯಮೂರ್ತಿಯವರ ಬದಲಿಗೆ ಕೇಂದ್ರ ಗೃಹ ಸಚಿವರನ್ನು ಸೇರಿಸಿರುವುದು ಸ್ವತಂತ್ರ ಹಾಗೂ ನಿಷ್ಪಕ್ಷಪಾತ ನೇಮಕಾತಿ ವ್ಯವಸ್ಥೆಗೆ ಧಕ್ಕೆ ತರುತ್ತದೆ. ಹೀಗಾಗಿ ಹಿಂದಿನ ವ್ಯವಸ್ಥೆಯನ್ನು ಮರುಸ್ಥಾಪಿಸುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಒತ್ತಾಯಿಸಿದರು.

ಮುಖ್ಯ ಚುನಾವಣಾ ಆಯುಕ್ತರಿಗೆ ನೀಡಿರುವ ಕಾನೂನು ವಿನಾಯಿತಿಯನ್ನು ರದ್ದುಗೊಳಿಸಬೇಕು. ದೇಶದ ಪ್ರತಿಯೊಬ್ಬರೂ ಕಾನೂನಿನ ಮುಂದೆ ಹೊಣೆಗಾರರಾಗಿರುವಂತೆ ಚುನಾವಣಾ ಆಯುಕ್ತರೂ ತಮ್ಮ ಕಾರ್ಯಗಳಿಗೆ ಹೊಣೆಗಾರರಾಗಿರಬೇಕು ಎಂದು ಆಗ್ರಹಿಸಿದರು.

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಇಂಡಿಯಾ ಮೈತ್ರಿಕೂಟದ ಹೋರಾಟ ದೆಹಲಿಯಿಂದ ಹಳ್ಳಿಗಳವರೆಗೆ ನಿರಂತರವಾಗಿ ನಡೆಯಲಿದೆ. ಇತ್ತೀಚಿನ ವಿಧಾನ ಪರಿಷತ್ ಚುನಾವಣೆಗಳಲ್ಲಿ ವಾರಾಣಸಿ, ಪಾಟ್ನಾ ಹಾಗೂ ನಾಗಪುರದಂತಹ ಪ್ರದೇಶಗಳಲ್ಲಿಯೂ ಬಿಜೆಪಿ ಸೋಲು ಅನುಭವಿಸಿರುವುದು ಜನರ ಬದಲಾದ ಮನಸ್ಥಿತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಪಕ್ಷದ ಸೂಚನೆಯಂತೆ ಮುಂದಿನ ಐದು ದಿನಗಳಲ್ಲಿ ಬೀದರ್ ಜಿಲ್ಲೆಯ 12 ಬ್ಲಾಕ್‌ಗಳಲ್ಲಿಯೂ ಪ್ರತಿಭಟನೆ ನಡೆಸಲಾಗುವುದು. ಬಳಿಕ ಒಂದು ವಾರದ ಅಂತರದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಹೋರಾಟ ಹಮ್ಮಿಕೊಳ್ಳಲಾಗುವುದು. ತಮ್ಮ ನಾಲ್ಕು ಬೇಡಿಕೆಗಳು ಈಡೇರುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬಾಬುರಾವ್ ಹೊನ್ನಾ, ವಿಠಲ್‌ದಾಸ್ ಪ್ಯಾಗೆ, ಸಂತೋಷ ಚಿಟಗುಪ್ಪಾ, ರೇಷ್ಮಾ ಹಂಸರಾಜ್ ಹಾಗೂ ಓಂಪ್ರಕಾಶ್ ರೊಟ್ಟೆ ಸೇರಿದಂತೆ ಹಲವರು ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ, ಮಾಜಿ ವಿಧಾನ ಪರಿಷತ್ ಸದಸ್ಯ ಅರವಿಂದ್ ಅರಳಿ, ಅಮೃತರಾವ್ ಚಿಮಕೋಡೆ, ಬಸವರಾಜ್ ಮಾಳಗೆ, ನಿಜಾಮುದ್ದಿನ್, ಗುರುನಾಥ್ ಗಡ್ಡೆ, ದತ್ತು ಮೂಲಗೆ, ಶ್ರೀಕಾಂತ್ ಸ್ವಾಮಿ, ಡಾ. ಮಕ್ಸುದ್ ಚಂದಾ, ಗೋವರ್ಧನ್ ರಾಠೋಡ್, ಸಂತೋಷ ಜೊಳದಾಬಕೆ, ಗೀತಾ ಚಿದ್ರಿ, ಅಬ್ದುಲ್ ಸತ್ತಾರ್ ಮಂದಕನಳ್ಳಿ, ಬಸವರಾಜ್ ಭತಮುರಗೆ, ಎಂ.ಎ. ಸಮಿ, ನಾಸೀರ್ ಖಾದ್ರಿ, ಅನಿಲ್ ಜಾಧವ್, ಮಾರುತಿ ಮಾಸ್ಟರ್ ಜಗದೀಶ್ ಬಿರಾದಾರ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ವಚನ-ತತ್ವಪದ ವೈಚಾರಿಕ ನೆಲೆಗಟ್ಟಿನ ಸಾಹಿತ್ಯ; ಪ್ರೊ. ಲಿಂಗಪ್ಪ ಗೋನಾಳ

ಕಮಲಾಪುರ,

ಶರಣರು,ತತ್ವಪದಕಾರರ ಸಾತ್ವಿಕ ಚಿಂತನೆ, ಸಾಮಾಜಿಕ ಕಾಳಜಿ, ಮೌಢ್ಯ ನಿರಾಕರಣೆ, ಸಮಾನತೆ ತತ್ವ, ಜೀವನಾನುಭವ ಒಳಗೊಂಡಿರುವ ವಚನ ಹಾಗೂ ತತ್ವಪದ ವೈಚಾರಿಕ ನೆಲೆಗಟ್ಟಿನ ಸಾಹಿತ್ಯವಾಗಿದೆ ಎಂದು ಪ್ರೊ. ಲಿಂಗಪ್ಪ ಗೋನಾಳ ತಿಳಿಸಿದರು.

ಕಮಲಾಪುರ ತಾಲ್ಲೂಕಿನ ಮಹಾಗಾಂವ ಕ್ರಾಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಬುಧವಾರ ಆಯೋಜಿಸಿದ್ದ ವಚನ ಸಾಹಿತ್ಯ ಮತ್ತು ತತ್ವ ಪದಗಳ ರಚನಿಕತೆ ಕುರಿತು ಒಂದು ದಿನದ ರಾಷ್ಟೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ವಚನಗಳು ಉಪನಿಷತ್ತು, ಗಾಯತ್ರಿ ಮಂತ್ರಕ್ಕಿಂತಲೂ ಶ್ರೇಷ್ಠ. ಸುತ್ತಲಿನ ಪರಿಸರವನ್ನು ಅತಿ ಸೂಕ್ಷ್ಮವಾಗಿ ಗಮನಿಸಿ, ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸಿದ ಶರಣರು, ವಚನಗಳ ಮೂಲಕ ಜನಪರ ಸಂಸ್ಕೃತಿಯನ್ನು ಎತ್ತಿ ಹಿಡಿದರು ಎಂದು ಹೇಳಿದರು.

ಕೇವಲ ರಾಜ-ಮಹಾರಾಜರು ಮಾತ್ರ ಸಾಹಿತ್ಯದ ವಸ್ತುವಲ್ಲ. ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ವಿಷಯವೂ ಸಾಹಿತ್ಯದ ವಸ್ತುವಾಗುತ್ತದೆ ಎಂಬುದನ್ನು ವಚನಗಳು ಸಾರಿವೆ. ದೇವರ ಮೇಲಿನ ಭಕ್ತಿಗೆ ಮಧ್ಯವರ್ತಿ ಬೇಕಿಲ್ಲ ಎಂಬುದು ವಚನಗಳ ಸಂದೇಶ. ಗದ್ಯದ ಗಂಧ, ಪದ್ಯದ ಅಂದವನ್ನು ವಚನಗಳು ಒಳಗೊಂಡಿವೆ. ವಚನ ತತ್ವಪದ 'ಗಳಲ್ಲಿ ಚಿಕಿತ್ಸಕ ಪದ್ಧತಿಯೂ ಅಡಗಿದೆ. ವಚನ ಭಾಷೆ ಅಚ್ಚಗನ್ನಡ ಎಂದು ಅವರು ವಿವರಿಸಿದರು.



ಸೊಲ್ಲಾಪುರದ ಶರಣ ಚಿಂತಕಿ ರಾಜೇಶ್ವರಿ ಲೋಕಾಪುರ ಅವರು 'ವಚನ ಹಾಗೂ ತತ್ವಪದದಲ್ಲಿ ಕಾಯಕ ನಿಷ್ಠೆ' ವಿಷಯ ಕುರಿತು ವಿಚಾರ ಮಂಡಿಸಿದರು. ಕಾಯಕ ನಿರತನಾದರೆ ದೇವರನ್ನೂ ಮರೆಯಬೇಕು. ಕಾಯಕ ಮಾಡಿಯೇ ಪ್ರಸಾದ ಸ್ವೀಕರಿಸಬೇಕು ಎಂಬುದು ಶರಣರ ಸಂದೇಶ ಎಂದು ಅವರು ಹೇಳಿದರು.

ಶರಣಬಸವ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಚಿದಾನಂದ ಚಿಕ್ಕಮಠ ಅವರು 'ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು' ಕುರಿತು ಮಾತನಾಡಿದರು.

ವಚನ ಸಾಹಿತ್ಯ ಮತ್ತು ತತ್ವಪದದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯದ ಬಹುಶಿಸ್ತೀಯ ಅಧ್ಯಯನ ಅಗತ್ಯವಿದೆ. ಅನುಭವ ಮಂಟಪದಲ್ಲಿ ಪ್ರಜಾಸತ್ತಾತ್ಮಕತೆ ಇತ್ತು. ಮಾತನಾಡುವ ಹಕ್ಕಿನ ಜೊತೆಗೆ ಮಾತಿಗೆ ಮಹತ್ವವಿತ್ತು. ಸರ್ವ ಸಮ್ಮತದ ಮಾತುಗಳೇ ವಚನಗಳು. ಸಂವಿಧಾನದ ಬಹುತೇಕ ಅಂಶಗಳು ವಚನ, ತತ್ವಪದಗಳಲ್ಲಿ ಇವೆ ಎಂದು ಅವರು ವಿವರಿಸಿದರು. ಶಾಸಕ ಬಸವರಾಜ ಮತ್ತಿಮಡು, ವಕೀಲರ ಸಂಘದ ಅಧ್ಯಕ್ಷ ಶಿವಕುಮಾರ ಪಸಾರ, ಮಲ್ಲಿಕಾರ್ಜುನ ಮರತೂರಕರ್ ಕಾಲೇಜಿನ ಪ್ರಾಚಾರ್ಯರಾದ ಡಾ. ಶರಣಪ್ಪ ಮಾಳಗಿ,ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ವಡ್ಡನಕೇರಿ, ಲಕ್ಷ್ಮಣ ಬೋಸ್ಲೆ, ತೀರ್ಥಕುಮಾರ ಬೆಳಕೋಟಾ, ತಾಲ್ಲೂಕು ಘಟಕದ ಅಧ್ಯಕ್ಷ ಶರಣಬಸಪ್ಪ ವಡ್ಡನಕೇರಿ, ಪ್ರಾಧ್ಯಾಪಕ ಅನಿಲಕುಮಾರ ಹಾಲು, ಕರಿಗೋಳೇಶ್ವರ, ಶ್ರೀಕಾಂತ ಪಾಟೀಲ, ಜ್ಯೋತಿರ್ಮಯ ಖಡಕೆ ಮತ್ತಿತರು ಭಾಗವಹಿಸಿದ್ದರು.

# ಚಿಂಚೋಳಿ ಬೌದ್ಧ ಧರ್ಮವು ಶಾಂತಿ, ಸಮಾನತೆಯ ಸಂದೇಶ ಸಾರುತ್ತದೆ: ಶಾಸಕ ಡಾ.ಅವಿನಾಶ್ ಜಾಧವ್

ಚಿಂಚೋಳಿ:

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ದೀಕ್ಷಾ ಬುದ್ಧ ವಿಹಾರ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ.), ತುಮಕುಂಟಾ ಹಾಗೂ ಭಾರತ ಭ್ರಮಣ ಭಿಕ್ಕು ಸಂಘ (ರಿ.), ಹೊಸ ಮುಂಬೈ ಇವರ ಆಶ್ರಯದಲ್ಲಿ ಪ್ರಥಮ ಬೌದ್ಧ ಧಮ್ಮ ಪರಿಷತ್ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಡಾ. ಅವಿನಾಶ್ ಜಾಧವ್, ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಧರ್ಮ ಯಾವುದಾದರೂ ಇದ್ದರೆ ಅದು ಬೌದ್ಧ ಧರ್ಮವಾಗಿದೆ. ಈ ಧರ್ಮವು ಮನುಷ್ಯರನ್ನು ಪರಸ್ಪರ ಸಮಾನತೆಯಿಂದ ಕಾಣುವಂತೆ ಮಾಡಿದೆ. ವಿದೇಶಗಳಲ್ಲಿ ಯುದ್ಧಗಳು ನಡೆಯುತ್ತಿದ್ದು, ಹಲವು ಕಡೆ ಅಶಾಂತಿ ನೆಲೆಸಿದೆ. ಆದರೆ ಬುದ್ಧನ ಧರ್ಮ ಇರುವೆಡೆ ಶಾಂತಿ ಮತ್ತು ಸಮಾನತೆ ಇರುತ್ತದೆ. ಭಗವಾನ್ ಬುದ್ಧರನ್ನು ವಿಷ್ಣುವಿನ ಒಂಬತ್ತನೇ ಅವತಾರ ಎಂದು ಹೇಳಲಾಗುತ್ತದೆ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಗೌತಮ ಬಿ. ಬೊಮ್ಮನಹಳ್ಳಿ, ತಥಾಗತ ಗೌತಮ ಬುದ್ಧರು ಮನುಷ್ಯರು ಸೇರಿದಂತೆ ಸಕಲ ಜೀವಿಗಳನ್ನು ಸಮಾನವಾಗಿ ಕಂಡಿದ್ದಾರೆ. ಬೌದ್ಧ ಧರ್ಮವನ್ನು ಅಳಿಸಿಹಾಕಲು ದೇಶದ ಮೇಲೆ ಪರಕೀಯರು 23 ಬಾರಿ ದಾಳಿ ನಡೆಸಿ ಕುತಂತ್ರ ಮಾಡಿದ್ದಾರೆ ಎಂದು ಹೇಳಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮತಾಂತರಗೊಂಡ ಸಂದರ್ಭದಲ್ಲಿ, ನಾನು ಮೂಲ ಮನೆಗೆ ಹೊರಟಿದ್ದೇನೆ, ಆದರೆ ಧರ್ಮಾಂತರವಾಗಿಲ್ಲ. ಈ ದೇಶದಲ್ಲಿ ಮೊದಲಿನಿಂದಲೂ ಇದ್ದ ಧಮ್ಮವೆಂದರೆ ಅದು ಬೌದ್ಧ ಧರ್ಮ ಮಾತ್ರ. ನಾನು ಮರಳಿ ಮನೆಗೆ ಹೋಗುತ್ತಿದ್ದೇನೆ, ಇದು ನನ್ನ ಪುನರ್ಜನ್ಮ ಎಂದು ಹೇಳಿದ್ದರು ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಭಂತೇಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಬೌದ್ಧ ಉಪಾಸಕರು ಮತ್ತು ಉಪಾಸಕಿಯರು ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಪುಷ್ಪಾರ್ಚನೆ ಸಲ್ಲಿಸುತ್ತಾ ಸಾಗಿದ ಬೌದ್ಧ ಧಮ್ಮ ಅನುಯಾಯಿಗಳು ಗಮನ ಸೆಳೆದರು.

ಕಾರ್ಯಕ್ರಮವನ್ನು ಅಶೋಕ ಹೂವಿನಬಾವಿ ನಿರೂಪಿಸಿದರು. ಈ ಸಂದರ್ಭದಲ್ಲಿ ಹಿರಿಯ ಮುಖಂಡ ಗೋಪಾಲ ರಾವ್ ಕಟ್ಟಿಮನಿ, ಶಾಮರಾವ ಕೊರವಿ, ಆನಂದ ಕುಮಾರ ಟೈಗರ್ ಪಾಂಡುರಂಗ ಲೋಡ್ಡನೂರ್ ವೈಜನಾಥ ಮಿತ್ರ, ಮಾರುತಿ ಅಪ್ಪನೋರ್ ವಿಜಯಕುಮಾರ ಚೆಂಗಟಿ, ಶ್ರೀಮಂತ ಕಟ್ಟಿಮನಿ, ಕೆ.ಎಂ. ಬಾರಿ, ದೇವೇಂದ್ರಪ್ಪ ಹೋಳ್ಕರ್ ಸೇರಿದಂತೆ ವಿವಿಧ ರಾಜಕೀಯ ಮುಖಂಡರು ಹಾಗೂ ಬೌದ್ಧ ಉಪಾಸಕರು ಮತ್ತು ಉಪಾಸಕಿಯರು ಉಪಸ್ಥಿತರಿದ್ದರು.

## ಒಂದನೇಯ ಪುಟದಿಂದ

# ಕೇಂದ್ರದಿಂದ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ವಿಶೇಷ ಅನುದಾನ ನೀಡುವಂತೆ ಒತ್ತಾಯಿಸಲು ಸಚಿವರ ಪ್ರಸ್ತಾವ

ವರ್ಷ ₹5,000 ಕೋಟಿ ವಿಶೇಷ ಅನುದಾನ ಒದಗಿಸುತ್ತಿದ್ದು, ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರವೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪ್ರತ್ಯೇಕ ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲು ಸಮಿತಿಯು ನಿಲುವು ಕೈಗೊಳ್ಳುವಂತೆ ಡಾ. ಅಜಯ್ ಧರ್ಮಸಿಂಗ್ ವಿಷಯ ಮಂಡಿಸಿದರು.

''371() ಮೂಲಕ ವಿಶೇಷ ಸ್ಥಾನಮಾನ ದೊರೆತಿರುವ ಪ್ರದೇಶಕ್ಕೆ ರಾಜ್ಯ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರವೂ ಅಭಿವೃದ್ಧಿ ದೃಷ್ಟಿಯಿಂದ ವಿಶೇಷ ಆರ್ಥಿಕ ನೆರವು ನೀಡಬೇಕು. ಈ ಕುರಿತು ಕೇಂದ್ರದ ಮೇಲೆ ಒತ್ತಡ ತರಬೇಕಾಗಿದೆ,'' ಎಂದು ಸಚಿವರು ಅಭಿಪ್ರಾಯಪಟ್ಟರು.

ಅನುದಾನ ಹಂಚಿಕೆಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸಮಾನ ಪಾಲು

ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ವಿಭಾಗಗಳಿಗೆ ವಿವಿಧ ಇಲಾಖೆಗಳ ಮೂಲಕ ನೀಡಲಾಗುತ್ತಿರುವ ಅಭಿವೃದ್ಧಿ ಅನುದಾನದ ಅನುಪಾತದಲ್ಲಿಯೇ ಕಲ್ಯಾಣ ಕರ್ನಾಟಕ ವಿಭಾಗಕ್ಕೂ ಆಯಾ ಇಲಾಖಾವಾರು ಸಮಾನ ಅನುದಾನ ಹಂಚಿಕೆ ಆಗಬೇಕು ಎಂದು ಸಚಿವರು ಸಭೆಯ ಗಮನಕ್ಕೆ ತಂದರು.

ಉಳಿದ ವಿಭಾಗಗಳಿಗೆ ಆಯಾ ಇಲಾಖಾವಾರು ಪ್ರತಿ ವರ್ಷ ಒದಗಿಸುವಷ್ಟೇ ಅನುದಾನವನ್ನು ಕಲ್ಯಾಣ ಕರ್ನಾಟಕ ವಿಭಾಗಕ್ಕೂ ಒದಗಿಸಿ ತದನಂತರ ಹೆಚ್ಚುವರಿಯಾಗಿ ವಿಶೇಷ ಅನುದಾನ ಒದಗಿಸಿದಲ್ಲಿ ಮಾತ್ರ ಸಮಾನ ಅಭಿವೃದ್ಧಿ ಸಾಧಿಸಲು ಸಾಧ್ಯವಿದ್ದು ಎಲ್ಲಾ ಇಲಾಖಾ ಅಧಿಕಾರಿಗಳು ಈ ಕುರಿತು ಕ್ರಮವಹಿಸಲು ಸಮಿತಿ ನಿರ್ದೇಶನ ನೀಡಲು ಕೋರಿದರು.

ವಿವಿಧ ಇಲಾಖೆಗಳು ಕಲ್ಯಾಣ ಕರ್ನಾಟಕದಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ () ಅನುದಾನವನ್ನು ಬಳಕೆಮಾಡಲು ಕಡ್ಡಾಯವಾಗಿ ಮಂಡಳಿಯ ಗಮನಕ್ಕೆ ತಂದು ಸಂಪುಟ ಸಭೆಯಲ್ಲಿ ಮಂಡಿಸಲು ಕ್ರಮವಹಿಸಲು ಸೂಕ್ತ ನಿರ್ದೇಶನ ನೀಡಲು ಸಭೆಯಲ್ಲಿ ಅಭಿಪ್ರಾಯ ಮಂಡಿಸಿದರು.

ಶಿಕ್ಷಕರು, ಆರೋಗ್ಯ ಕೇಂದ್ರಗಳು ಮತ್ತು ಸಿಬ್ಬಂದಿ ಹಂಚಿಕೆಯಲ್ಲಿ ಸಮಾನತೆ

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ರಾಜ್ಯದ ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ವಿಭಾಗಗಳಿಗೆ ಯಾವ ಅನುಪಾತದಲ್ಲಿ ಶಿಕ್ಷಕರ ಹುದ್ದೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂಚಿಕೆ ಮಾಡಲಾಗುತ್ತಿದೆಯೋ, ಅದೇ ಅನುಪಾತದಲ್ಲಿ ಕಲ್ಯಾಣ ಕರ್ನಾಟಕ ವಿಭಾಗಕ್ಕೂ ಹಂಚಿಕೆ ಆಗಬೇಕು ಎಂದು ಡಾ. ಅಜಯ್ ಧರ್ಮಸಿಂಗ್ ಒತ್ತಾಯಿಸಿದರು.

ಇದೇ ತತ್ವವನ್ನು ಇತರ ಇಲಾಖೆಗಳ ಸಿಬ್ಬಂದಿ ಮತ್ತು ಹುದ್ದೆಗಳ ಹಂಚಿಕೆಯಲ್ಲಿ ಕೂಡ ಅನುಸರಿಸಿ, ಕಲ್ಯಾಣ ಕರ್ನಾಟಕಕ್ಕೆ ಸಮಾನ ಅವಕಾಶ ಕಲ್ಪಿಸುವಂತೆ ಅಗತ್ಯ ನಿರ್ದೇಶನ ನೀಡಲು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ಅವರು ವಿಷಯ ಮಂಡಿಸಿದರು.

''371()ಯ ಉದ್ದೇಶ ಕೇವಲ ಉದ್ಯೋಗ ಮೀಸಲಾತಿಗೆ ಸೀಮಿತವಲ್ಲ. ಕಲ್ಯಾಣ ಕರ್ನಾಟಕದ ಶಿಕ್ಷಣ, ಆರೋಗ್ಯ, ಆಡಳಿತ, ಮೂಲಸೌಕರ್ಯ ಮತ್ತು ಅಭಿವೃದ್ಧಿ ಅವಕಾಶಗಳಲ್ಲಿ ಇರುವ ಅಂತರವನ್ನು ಕಡಿಮೆ ಮಾಡಿ, ರಾಜ್ಯದ ಇತರೆ ಭಾಗಗಳ ಸಮಾನ ಮಟ್ಟಕ್ಕೆ ತರುವುದು ಅದರ ಮೂಲ ಆಶಯವಾಗಿದೆ. ಆ ಆಶಯವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಬೇಕು,'' ಎಂದು ಡಾ. ಅಜಯ್ ಧರ್ಮಸಿಂಗ್ ಹೇಳಿದರು.

ಸಭೆಯಲ್ಲಿ ಗೃಹ ಸಚಿವ ಶ್ರೀ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಸಚಿವ ಸಂಪುಟ ಉಪಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಭೂ ಪರಿವರ್ತನೆ ಕಚೇರಿ ಶಿರಸ್ತೆದಾರರ ವಿರುದ್ಧ ಕ್ರಮಕ್ಕೆ ಒತ್ತಾಯ

ವಿಳಂಬವಾಗುತ್ತಿವೆ ಎಂಬ ಆತಂಕವೂ ಇದೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ತನಿಖಾ ತಂಡ ರಚಿಸಿ, ಸಂಬಂಧಪಟ್ಟ ಫಲಾನುಭವಿಗಳಿಂದ ಖಚಿತ ಮಾಹಿತಿ ಪಡೆದು ಪರಿಶೀಲನೆ ನಡೆಸಬೇಕೆಂದು,ತನಿಖೆ ಪೂರ್ಣಗೊಳ್ಳುವವರೆಗೆ ಶಿರಸ್ತೆದಾರರನ್ನು ಭೂ ಪರಿವರ್ತನೆ ಶಾಖೆಯ ಕೆಲಸದಿಂದ ಬದಲಾಯಿಸಿ, ಕಡತಗಳ ವಿಲೇವಾರಿಗೆ ಅಡಚಣೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು, ತಪ್ಪಿತಸ್ಥರು ಕಂಡುಬಂದಲ್ಲಿ ನಿಯಮಾನುಸಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ದಲಿತ ಸೇನೆ ಜಿಲ್ಲಾಧ್ಯಕ್ಷರು ಮಾರುತಿ ಚಿಕ್ಕಸೂಗೂರು,ಸೇರಿದಂತೆ ಉಪಸ್ಥಿತರಿದ್ದರು.

# ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ರದ್ದತಿ ಖಂಡಿಸಿ ಪ್ರತಿಭಟನೆ: 15 ಬೇಡಿಕೆಗಳ ಈಡೇರಿಕೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಒತ್ತಾಯ

ಹೆಚ್ಚುವರಿ ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

15 ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಬಡವರಿಗೆ ಸರ್ಕಾರಿ ಅಥವಾ ಖಾಸಗಿ ಭೂಮಿ ಗುರುತಿಸಿ ನಿವೇಶನ ಹಂಚಿಕೆ ಮಾಡಬೇಕು. ನಿವೇಶನ ಹೊಂದಿರುವ ವಸತಿರಹಿತರಿಗೆ ಮನೆ ಮಂಜೂರು ಮಾಡಬೇಕು. ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಪ್ರೊ. ಬಿ. ಕೃಷ್ಣಪ್ಪ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು ಹಾಗೂ ಅವರ ಜನ್ಮದಿನವನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಬೇಕು ಎಂದು ಆಗ್ರಹಿಸಿದರು.

ಕಂದಾಯ ಕಾಯ್ದೆಯ ನಮೂನೆ 57ರಡಿ ಬಗರ್ ಹುಕುಂ ಸಾಗುವಳಿದಾರರು ಸಲ್ಲಿಸಿರುವ ಅರ್ಜಿಗಳನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು. ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವ ಕುಟುಂಬಗಳ ವಸತಿ ಸಮಸ್ಯೆ ಪರಿಹರಿಸಲು 94 ಮತ್ತು 94ಸಿಸಿ ಅಡಿಯಲ್ಲಿ ಸಕ್ರಮಗೊಳಿಸಿ ಹಕ್ಕುಪತ್ರ ವಿತರಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಅನುದಾನದ ದುರ್ಬಳಕೆ ತಡೆಯಲು ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ-2013ರ ಸೆಕ್ಷನ್ 7(ಸಿ) ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಜಾತಿ ಹಾಗೂ ಕೋಮು ಗಲಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳು ಮೃತಪಟ್ಟರೆ ಅವರ ಕುಟುಂಬಗಳಿಗೆ ನೀಡುವ ಪರಿಹಾರವನ್ನು ₹8.25 ಲಕ್ಷದಿಂದ ₹25 ಲಕ್ಷಕ್ಕೆ ಹೆಚ್ಚಿಸುವುದರ ಜೊತೆಗೆ ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಗಂಗಾ ಕಲ್ಯಾಣ, ಭೂ ಒಡೆತನ, ಉದ್ಯಮಶೀಲತೆ ಸೇರಿದಂತೆ ವಿವಿಧ ನಿಗಮಗಳ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ಮಂಜೂರು ಮಾಡಬೇಕು. 2026-27ನೇ ಸಾಲಿನಲ್ಲಿ ಘಟಕ ವೆಚ್ಚ ಹಾಗೂ ಗುರಿ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ ಹಾಗೂ ವಸತಿ ಶಾಲೆಗಳಲ್ಲಿ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಬೇಕು. ಕಂದಾಯ ಇಲಾಖೆಯ ಗ್ರಾಮ ಸಹಾಯಕರ ಸೇವೆಯನ್ನು ಕಾಯಂಗೊಳಿಸಬೇಕು. ದೇವದಾಸಿ ಮತ್ತು ವಿಧವಾ ಮಹಿಳೆಯರ ಮಾಸಾಶನವನ್ನು ₹5,000ಕ್ಕೆ ಹೆಚ್ಚಿಸಬೇಕು. ವಸತಿ ನಿಲಯಗಳ ವಿದ್ಯಾರ್ಥಿಗಳ ಮಾಸಿಕ ಭೋಜನ ವೆಚ್ಚವನ್ನು ₹1,000ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ-1989ರಡಿ ದಾಖಲಾದ ಪ್ರಕರಣಗಳ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡಬೇಕು. ಸರ್ಕಾರಿ ನೌಕರರ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಿ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೊಳಿಸಬೇಕು. ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಗೋಹತ್ಯೆ ನಿಷೇಧ ಕಾಯ್ದೆ-2020ನ್ನು ರದ್ದುಪಡಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ದಲಿತ ಸಂಘಟನೆಗಳ ಮುಖಂಡರ ಸಭೆ ನಡೆಸಿ ದಲಿತರು ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ, ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್, ರಾಜ್ಯ ಖಜಾಂಚಿ ಬಿ.ಎ. ಕಾಟ್ಟೆ, ರಾಯಚೂರು ವಿಭಾಗದ ಪದಾಧಿಕಾರಿಗಳು ಹಾಗೂ ವಿವಿಧ ಜಿಲ್ಲೆಗಳ ರಾಜ್ಯ, ಜಿಲ್ಲಾ ಮತ್ತು ವಿಭಾಗೀಯ ಮುಖಂಡರು ಸೇರಿದಂತೆ ದಲಿತ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

# ಖರ್ಗೆ ಬೇಷರತ್ ಕ್ಷಮೆಯಾಚಿಸಲಿ: ಜೆಡಿಎಸ್ ಆಗ್ರಹ

ಸಾಲಮನ್ನಾ ಹಾಗೂ ನೀರಾವರಿ ಯೋಜನೆಗಳಿಗೆ ಕೊಡುಗೆ ನೀಡಿದ್ದಾರೆ. ಇಂತಹ ನಾಯಕರನ್ನು ಅವಹೇಳನ ಮಾಡುವ ಮೂಲಕ ಗ್ರಾಮೀಣ ಜನರಿಗೂ ಅವಮಾನ ಮಾಡಲಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇದಲ್ಲದೆ, ರಾಜ್ಯ ಸರ್ಕಾರ ಬಸ್ ಪ್ರಯಾಣ ದರ, ಹಾಲು ಮತ್ತು ಮೊಸರಿನ ದರ ಏರಿಕೆ ಮಾಡಿರುವುದರಿಂದ ಜನಸಾಮಾನ್ಯರ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಸರ್ಕಾರ ಕೂಡಲೇ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು. ರೈತರಿಗೆ ಬೆಳೆ ಪರಿಹಾರ ವಿತರಣೆ ಕುರಿತು ಸ್ಪಷ್ಟನೆ ನೀಡಬೇಕು. ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕು. ಸರ್ಕಾರಿ ನೌಕರರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಪಾವತಿಸುವ ಬಗ್ಗೆಯೂ ಸರ್ಕಾರ ಗಮನಹರಿಸಬೇಕು ಎಂದು ಆಗ್ರಹಿಸಲಾಗಿದೆ.

ರಾಯಚೂರು ಜಿಲ್ಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ನಡೆದಿದ್ದರೂ ಸಂಬಂಧಪಟ್ಟ ಸಚಿವರು ಜಿಲ್ಲೆಗೆ ಭೇಟಿ ನೀಡಿ ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎಂ. ವಿರುಪಾಕ್ಷಿ, ಜಿಲ್ಲಾ ಕಾರ್ಯಾಧ್ಯಕ್ಷ ಎನ್. ಶಿವಶಂಕರ್, ರಾಜ್ಯ ಕಾರ್ಯದರ್ಶಿ ಲಕ್ಷ್ಮೀಪತಿ ಗಾಣದಾಳ, ರಾಜ್ಯ ಉಪಾಧ್ಯಕ್ಷ ನರಸಿಂಹ ನಾಯಕ, ನಗರ ಅಧ್ಯಕ್ಷ ಬಿ. ತಿಮ್ಮಾರೆಡ್ಡಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ, ಜಿಲ್ಲಾ ಒಬಿಸಿ ಅಧ್ಯಕ್ಷ ಜಂಬುನಾಥ ಯಾದವ, ಗ್ರಾಮಾಂತರ ಅಧ್ಯಕ್ಷ ನಾಗರಾಜಗೌಡ, ಜಿಲ್ಲಾ ಪರಿಶಿಷ್ಟ ಘಟಕದ ಅಧ್ಯಕ್ಷ ಹಂಪಯ್ಯ ನಾಯಕ, ನರಸಪ್ಪ ಆಶಾಪೂರ, ಮುಖಂಡರಾದ ಪಿ. ರಾಜು, ನರಸಿಂಹಲು, ಆಂಜಿನಯ್ಯ ಯಾದವ, ವಕೀಲರು, ಸೀಮಾ ನದಾಫ್, ಶಾಲಂ, ಅಮ್ಮದ್ ಹುಸೇನ್, ಸಾಬೀರ್, ಪರ್ವೇಜ್, ಅಲಂಬಾಬು, ಆದಿರಾಜ್, ಪಿ. ನರಸಿಂಹಲು, ವೆಂಕಟಸ್ವಾಮಿ, ಅಮಿತ್ ಸುಂಕಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಎಸ್‌ಐಆರ್ ರದ್ದತಿಗೆ ಆಗ್ರಹಿಸಿ ಇಂಡಿಯಾ ಒಕ್ಕೂಟದಿಂದ ಪ್ರತಿಭಟನೆ




ಕಲಬುರಗಿ

ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಿ, ಮತದಾನದ ಹಕ್ಕಿನಿಂದ ವಂಚಿತರಾಗಿರುವ ಅರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಗೆ ಮರುಸೇರ್ಪಡೆಗೊಳಿಸಬೇಕು ಎಂದು ಆಗ್ರಹಿಸಿ ಇಂಡಿಯಾ ಒಕ್ಕೂಟದ ವತಿಯಿಂದ ಗುರುವಾರ ನಗರದ ಜಗತ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಸ್‌ಐಆರ್ ಪ್ರಕ್ರಿಯೆಯ ಮೂಲಕ ದೇಶದ ಕೋಟ್ಯಂತರ ಅರ್ಹ ಮತದಾರರನ್ನು ಮತದಾನದ ಹಕ್ಕಿನಿಂದ ವಂಚಿಸುವ ಷಡ್ಯಂತ್ರ ನಡೆಯುತ್ತಿದೆ. ಫಾರಂ-7ರ ದುರ್ಬಳಕೆ ಮೂಲಕ ಅರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗುತ್ತಿದೆ. ರಾಜ್ಯದ 99.32 ಲಕ್ಷಕ್ಕೂ ಅಧಿಕ ಹಾಗೂ ದೇಶದ 14 ಕೋಟಿಗೂ ಹೆಚ್ಚು ಮತದಾರರು ಮತದಾನದ ಹಕ್ಕು ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಚುನಾವಣಾ ಆಯೋಗದ ಲೋಪದಿಂದ ಮತದಾರರ ಪಟ್ಟಿಯಿಂದ ಹೊರಗುಳಿದ ಅರ್ಹ ಮತದಾರರಿಗೆ ಮತ್ತೆ ಫಾರಂ-6 ಸಲ್ಲಿಸುವಂತೆ ಸೂಚಿಸುತ್ತಿರುವುದು ಕಾನೂನುಬಾಹಿರವಾಗಿದೆ. ಈಗಾಗಲೇ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದಿದ್ದವರನ್ನೇ ಹೊಸ ಮತದಾರರಂತೆ ಅರ್ಜಿ ಸಲ್ಲಿಸುವಂತೆ ಒತ್ತಾಯಿಸುವ ಮೂಲಕ ಆಯೋಗ ಮತದಾರರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ನಡೆಸುವುದು ನಾಗರಿಕರ ಹಕ್ಕಾಗಿದೆ. ಆದರೆ, ದೆಹಲಿಯಲ್ಲಿ ಪ್ರತಿಭಟನಾಕಾರರಿಗೆ ನಿರ್ಬಂಧ ವಿಧಿಸಿ, ಪೊಲೀಸರು ಹಾಗೂ ಅರೆಸೈನಿಕ ಪಡೆಗಳನ್ನು ನಿಯೋಜಿಸುವ ಮೂಲಕ ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ. ಹೋರಾಟಗಾರರ ಬಂಧನ ಮತ್ತು ದಮನಕಾರಿ ಕ್ರಮಗಳು ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಪ್ರತಿಬಿಂಬಿಸುತ್ತಿವೆ ಎಂದು ಟೀಕಿಸಿದರು.

ಏಕಪಕ್ಷೀಯವಾಗಿ ಎಸ್‌ಐಆರ್ ಪ್ರಕ್ರಿಯೆ ಜಾರಿಗೊಳಿಸಿರುವ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರತಿಭಟನಾಕಾರರ ಮೇಲೆ ದೌರ್ಜನ್ಯ ಎಸಗಿದ ಪೊಲೀಸರ ವಿರುದ್ಧ ಕ್ರಮ ಜರುಗಿಸಬೇಕು ಹಾಗೂ ಯುವತಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಹಕ್ಕೊತ್ತಾಯಗಳು: ದೆಹಲಿ ಪೊಲೀಸರ ಕಿರುಕುಳ ಮತ್ತು ಬೇಕಾಬಿಟ್ಟಿ ಬಂಧನಗಳನ್ನು ತಕ್ಷಣ ನಿಲ್ಲಿಸಬೇಕು. ಕಲಬುರಗಿ ಜಿಲ್ಲೆಯ 4.77 ಲಕ್ಷ ಸೇರಿದಂತೆ ರಾಜ್ಯದ 99.32 ಲಕ್ಷ ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಮರುಸೇರ್ಪಡೆಗೊಳಿಸಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು. ಫಾರಂ-7 ದುರ್ಬಳಕೆ ಮಾಡಿದವರ ಹಾಗೂ ಅದಕ್ಕೆ ಪ್ರೇರಣೆ ನೀಡಿದ ಬಿಜೆಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಬೇಡಿಕೆಗಳು ಈಡೇರದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಕಿರಣ ದೇಶಮುಖ, ಎಂಎಲ್‌ಸಿ ಜಗದೇವ ಗುತ್ತೇದಾರ, ಮಾಜಿ ಸಚಿವ ರೇವೂನಾಯಕ್ ಬೆಳಮಗಿ, ಇಂಡಿಯಾ ಒಕ್ಕೂಟದ ಮುಖಂಡರಾದ ಮಹೇಶಕುಮಾರ ರಾಠೋಡ, ಮಜರ್ ಅಲಂಖಾನ್, ಪ್ರವೀಣ ಪಾಟೀಲ ಹರವಾಳ, ಶಕೀಲ್ ಸರಡಗಿ, ಲಿಂಗರಾಜ ತಾರಫೈಲ್, ಶ್ಯಾಮ್ ನಾಟೀಕಾರ, ಮೌಲಾ ಮುಲ್ಲಾ, ಭೀಮಣ್ಣ ಸಾಲಿ, ಲವಿತ್ರ ವಸ್ತ್ರದ, ಭೀಮಾಶಂಕರ ಮಾಡಿಯಾಳ, ಪವನಕುಮಾರ ವಳಕೇರಿ, ಪರಶುರಾಮ ನಾಟೀಕಾರ, ಚಂದ್ರಶೇಖರ ಹಡಪದ ತೋನಸನಹಳ್ಳಿ, ಮಂಜು ಸಿ.ಕೆ. ಕಮಲಾಪೂರ, ಧರ್ಮರಾಜ ಹೇರೂರ, ಟೈಗರ್ ವಿಘುನೇಶ, ಮಲ್ಲಿಕಾರ್ಜುನ ನಿಲೂರೆ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಬೀದರ್ ಮಹಾರಾಷ್ಟ್ರಕ್ಕೆ ಸೇರಬೇಕೆಂದು ವೀಡಿಯೋ ಮಾಡಿದ ಯುವಕನ ವಿರುದ್ಧ ಕ್ರಮಕ್ಕೆ ಆಗ್ರಹ



ಭಾಲ್ಕಿ:

ಕರ್ನಾಟಕದ ಅವಿಭಾಜ್ಯ ಅಂಗವಾಗಿರುವ ಬೀದರ್ ಜಿಲ್ಲೆ ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಹೇಳಿರುವುದಾಗಿ ಆರೋಪಿಸಲಾದ ಯುವಕನೊಬ್ಬನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಹಿನ್ನೆಲೆಯಲ್ಲಿ ಯುವಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಹೊಯ್ಸಳ ವೇದಿಕೆಯ ಅಧ್ಯಕ್ಷ ಸಂತೋಷ್ ನಾಟೇಕರ್ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಬುಧವಾರ ಸಲ್ಲಿಸಿದ ಮನವಿಯಲ್ಲಿ, ಕನ್ನಡಿಗರು ಮತ್ತು ಮರಾಠರು ಸೌಹಾರ್ದತೆಯಿಂದ ಬದುಕುತ್ತಿರುವ ಬೀದರ್ ಜಿಲ್ಲೆಯಲ್ಲಿ ಭಾಷೆ ಹಾಗೂ ಸಮುದಾಯದ ಹೆಸರಿನಲ್ಲಿ ವೈಮನಸ್ಸು ಮೂಡಿಸುವ ಪ್ರಯತ್ನವನ್ನು ಸಹಿಸುವುದಿಲ್ಲ ಎಂದು ತಿಳಿಸಲಾಗಿದೆ.

ವಿಡಿಯೊದಲ್ಲಿರುವ ಯುವಕನ ಹೇಳಿಕೆಗಳಿಂದ ಜಿಲ್ಲೆಯ ಶಾಂತಿ, ರಾಜ್ಯದ ಏಕತೆ ಹಾಗೂ ಸಾಮರಸ್ಯಕ್ಕೆ ಧಕ್ಕೆ ಉಂಟಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಮಗ್ರ ತನಿಖೆ ನಡೆಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಯಾವುದೇ ಅನ್ಯಾಯವಾಗಿದ್ದರೆ ಕಾನೂನುಬದ್ಧವಾಗಿ ನ್ಯಾಯ ಪಡೆಯಬಹುದು. ಆದರೆ, ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವ ಹಾಗೂ ರಾಜ್ಯದ ಏಕತೆಗೆ ಧಕ್ಕೆ ತರುವಂತಹ ಹೇಳಿಕೆಗಳು ಖಂಡನೀಯ. ಆರೋಪಗಳು ಸಾಬೀತಾದಲ್ಲಿ ಯುವಕನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಕಾನೂನಿನಲ್ಲಿ ಅವಕಾಶವಿದ್ದರೆ ಗಡಿಪಾರು ಮಾಡಬೇಕು ಎಂದು ಆಗ್ರಹಿಸಲಾಗಿದೆ.



# ಯುವಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿ: ಡಾ.ಮುಹಮ್ಮದ್ ಅಸ್ಗರ್ ಚುಲ್ಬುಲ್

ಕಲಬುರಗಿ:

ಇಸ್ಲಾಂ ವಿರೋಧಿ ಅಪಪ್ರಚಾರ ಹಾಗೂ ಪ್ರವಾದಿ ನಿಂದನೆಗಳನ್ನು ಎದುರಿಸಲು ಯುವಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಸೀರತ್ ಉನ್ನಬಿ ಸ್ಪರ್ಧೆಗಳ ಸಮಿತಿ ಅಧ್ಯಕ್ಷ ಡಾ.ಮುಹಮ್ಮದ್ ಅಸ್ಗರ್ ಚುಲ್ಬುಲ್ ಹೇಳಿದರು.

ನಗರದ ಸಂಗತ್ರಾಶ್‌ವಾಡಿಯ ಗುಲ್ಶನ್ ಅತ್ಫಾಲ್ ಉರ್ದು ಮತ್ತು ಹ್ಯೂಮನ್ ಏಜ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕೇಂದ್ರ ಸೀರತ್ ಸಮಿತಿ, ಅಖಿಲ ಭಾರತ ಮಿಲ್ಲಿ ಕೌನ್ಸಿಲ್ ಹಾಗೂ ಸೀರತ್ ಉನ್ನಬಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಹದೀಸ್, ಕುರಾನ್ ಹಾಗೂ ಸೀರತ್ ಕ್ವಿಜ್ ಸ್ಪರ್ಧೆಗಳು ನಡೆದವು.

ಕಳೆದ ಎಂಟು ವರ್ಷಗಳಿಂದ ಈ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದ್ದು, ಇವುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಜ್ಞಾನ ಹಾಗೂ ಪ್ರವಾದಿಯವರ ಮೇಲಿನ ಪ್ರೀತಿಯನ್ನು ಬೆಳೆಸಲಾಗುತ್ತಿದೆ. ಈ ಬಾರಿ ಸೀರತ್ ಕ್ವಿಜ್‌ನಲ್ಲಿ ಒಂದು ಸಾವಿರಕ್ಕೂ ಅಧಿಕ, ಕುರಾನ್ ಕ್ವಿಜ್‌ನಲ್ಲಿ 767 ಹಾಗೂ ಹದೀಸ್ ಕ್ವಿಜ್‌ನಲ್ಲಿ 300 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭ ಡಿಸೆಂಬರ್‌ನಲ್ಲಿ ನಡೆಯಲಿದ್ದು, ವಿಜೇತರು ಸೇರಿದಂತೆ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಶಂಸನಾ ಪತ್ರ ಹಾಗೂ ಉಡುಗೊರೆಗಳನ್ನು ನೀಡಲಾಗುವುದು ಎಂದು ಡಾ.ಮುಹಮ್ಮದ್ ಅಸ್ಗರ್ ಚುಲ್ಬುಲ್ ತಿಳಿಸಿದರು.



# ಸ್ವಚ್ಛ ಭಾರತ ಅಭಿಯಾನ: ತ್ಯಾಜ್ಯ ವಿಂಗಡಣೆ ಕುರಿತು ವಿದ್ಯಾರ್ಥಿಗಳಿಂದ ಪ್ರಾತ್ಯಕ್ಷಿಕೆ

ಕಲಬುರಗಿ:

ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ನಗರದ ಸಯ್ಯದ್ ಅಕ್ಬರ್ ಹುಸೈನಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳು ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ ಕುರಿತು ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು.

ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿಯರಾದ ಆಲಿಯಾ ನಿಶಾತ್, ಮಾಹೀನ್, ರಜಿಯಾ ಬೇಗಮ್, ಸನಾ ಕೌಸರ್, ಬುಸ್ರಾ, ಅಸ್ಮಾ ಬೇಗಮ್ ಹಾಗೂ ಅಲ್ಫಿಯಾ ಅವರು ವಿವಿಧ ಬಗೆಯ ತ್ಯಾಜ್ಯಗಳು ಮತ್ತು ಅವುಗಳನ್ನು ವಿಂಗಡಿಸುವ ವಿಧಾನಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಕಾಲೇಜಿನ ಶಿಕ್ಷಣ ಶಾಸ್ತ್ರ ವಿಭಾಗದ ಉಪನ್ಯಾಸಕಿ ಫಾತಿಮಾ ಬೇಗಮ್ ಅವರು ವಿದ್ಯಾರ್ಥಿನಿಯರನ್ನು ಪ್ರಾತ್ಯಕ್ಷಿಕೆಗೆ ಸಿದ್ಧಪಡಿಸಿದ್ದರು. ವಿದ್ಯಾರ್ಥಿನಿಯರ ವಿಭಿನ್ನ ಪ್ರಯತ್ನವನ್ನು ಕಾಲೇಜಿನ ಪ್ರಾಂಶುಪಾಲ ಡಾ.ಫಿರೋಜ್ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮ ಅಧಿಕಾರಿ ಡಾ. ಉಮರ್ ಫಾರೂಕ್, ಸಹಾಯಕ ಅಧಿಕಾರಿ ನಾಗರಾಜ್ ಸೇರಿದಂತೆ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ತಿಡಿಗೋಳ ಗಲಾಟೆ ಪ್ರಕರಣ: ದಲಿತರ ಮೇಲೆ ದೌರ್ಜನ್ಯ, ಸಾಮಾಜಿಕ ಬಹಿಷ್ಕಾರ ನಡೆದಿಲ್ಲ-ಅಮರೇಶ

ಎರಡು ಸಮುದಾಯದ ಹಿರಿಯರು ಬುದ್ಧಿವಾದ ಹೇಳಿ ಸರಿಮಾಡಿದ್ದಾರೆ. ಆದರೆ ಇದನ್ನೇ ನೆಪವಾಗಿ ಇಟ್ಟುಕೊಂಡು ಕೆಲವರು ತಿಡಿಗೋಳ ಗ್ರಾಮಕ್ಕೆ ಕಳಂಕ ತರುವಂತೆ ಕೆಲಸ ಮಾಡುತ್ತಿದ್ದಾರೆ. ಗ್ರಾಮದಲ್ಲಿ ಎಲ್ಲರೂ ಒಂದಾಗಿ ಇದ್ದೇವೆ. ಅದರೂ ಕೆಲವರು ಸುಳ್ಳು ಸುದ್ದಿಗಳನ್ನು ಹರಡಿಸುವ ಕೆಲಸ ಮಾಡುತ್ತಿದ್ದಾರೆ. ಅಂತವರ ವಿರುದ್ದ ಪೋಲೀಸ ಇಲಾಖೆ,ಜಿಲ್ಲಾಡಳಿ ಸೂಕ್ತ ಕ್ರಮ ಕೈಗೋಳಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸುಪುತ್ರ ಸ್ವಾಮಿ, ಕೆ.ಶರಣಪ್ಪ, ಅಮರೇಗೌಡ, ಶೇಖರಪ್ಪ,ಆದಪ್ಪ, ಯಂಕನಗೌಡ, ಯಂಕಣ ಜಿನ್ನದ್ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಏಕತೆ, ಐಕ್ಯತೆಯ ಮೌಲ್ಯ ಮೈಗೂಡಿಸಿಕೊಳ್ಳಲಿ: ಎಸ್.ಪಿ. ಸುಳ್ಳದ

ಕಲಬುರಗಿ:

ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ದೇಶದ ಏಕತೆ ಹಾಗೂ ಐಕ್ಯತೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಭವಿಷ್ಯದಲ್ಲಿ ಉತ್ತಮ ನಾಯಕರಾಗಿ ಹೊರಹೊಮ್ಮಬೇಕು ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಅಧ್ಯಕ್ಷ ಎಸ್.ಪಿ. ಸುಳ್ಳದ ಕರೆ ನೀಡಿದರು.

ನಗರದ ಅಪ್ಪಾ ಪಬ್ಲಿಕ್ ಸ್ಕೂಲ್‌ನಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ವಿಭಾಗ ಮಟ್ಟದ ದೇಶಭಕ್ತಿ ಹಾಗೂ ಜಾನಪದ ಗೀತ ಗಾಯನ ಸ್ಪರ್ಧೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ವಿಭಾಗ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು, ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಹಾರೈಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಎಸ್ಕಾರ್ಟ್ ಮೂಲಕ ಸ್ವಾಗತಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ವೇದಿಕೆ ಕಾರ್ಯಕ್ರಮ ಆರಂಭಗೊಂಡಿತು. ಗಣ್ಯರು ಸಂಸ್ಥಾಪಕರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಜಿಲ್ಲಾ ಕಾರ್ಯದರ್ಶಿ ಪೀರಪ್ಪ ಹೂಗುಂಡ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗೀಯ ಸಹಾಯಕ ಆಯುಕ್ತ ಸಿ.ಬಿ. ಪಾಟೀಲ ಓಕಳೆ ಅವರು ಸಸಿಗೆ ನೀರುಣಿಸಿ, ಡೊಳ್ಳು ಬಾರಿಸುವ ಮೂಲಕ ಸ್ಪರ್ಧೆಗೆ ಚಾಲನೆ ನೀಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಲಬುರಗಿ ಜಿಲ್ಲಾ ಅಧ್ಯಕ್ಷ ಬಸವರಾಜ ಬಳೂಂಡಗಿ ಸ್ಪರ್ಧಾರ್ಥಿಗಳಿಗೆ ಶುಭ ಹಾರೈಸಿದರು. ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಮಹೇಶ್ ಹೂಗಾರ ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಸಂತೋಷ ಗಂಗೂ ಸ್ಪರ್ಧೆ ಯಶಸ್ವಿಯಾಗಲಿ ಎಂದು ಹಾರೈಸಿದರು.

ಸ್ಪರ್ಧೆಯ ಯಶಸ್ವಿಗೆ ಸಂಗೀತಾ ತಿವಾರಿ, ಶೋಭಾ ಸಿಂಗೆ ಹಾಗೂ ಶಿವಲೀಲಾ ಎಸ್. ಕಲಗುರಕಿ ಸಹಕರಿಸಿದರು. ಸಂಗೀತ ಶಿಕ್ಷಕರು ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ಕಲಬುರಗಿ ಉತ್ತರ ತಾಲೂಕು ಕಾರ್ಯದರ್ಶಿ ಜಯಪ್ರಕಾಶ್ ಕಟ್ಟಿಮನಿ ನಿರೂಪಿಸಿದರು. ಕಲಬುರಗಿ ದಕ್ಷಿಣ ತಾಲೂಕು ಕಾರ್ಯದರ್ಶಿ ಗುರುಲಿಂಗಯ್ಯ ಹಿರೇಮಠ ವಂದಿಸಿದರು.

# ಮಧ್ಯರಾತ್ರಿ ಆರೋಗ್ಯ ಕೇಂದ್ರಗಳಿಗೆ ಡಿಎಚ್‌ಒ ದಿಢೀರ್ ಭೇಟಿ, ಪರಿಶೀಲನೆ

ಕಲಬುರಗಿ:

ಜಿಲ್ಲೆಯ ಆರೋಗ್ಯ ಸೇವೆಗಳ ಗುಣಮಟ್ಟ ಪರಿಶೀಲಿಸುವ ಉದ್ದೇಶದಿಂದ ನೂತನ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಸಿದ್ದರಾಮಪ್ಪ (ಸಿದ್ದು) ಪಾಟೀಲ್ ಅವರು ಮಧ್ಯರಾತ್ರಿ ಚಿತ್ತಾಪುರ ಸಾರ್ವಜನಿಕ ಆಸ್ಪತ್ರೆ, ವಾಡಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ನಾಲವಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇತ್ತೀಚೆಗಷ್ಟೇ ಅಧಿಕಾರ ವಹಿಸಿಕೊಂಡಿರುವ ಡಿಎಚ್‌ಒ, ಮೂರು ಆರೋಗ್ಯ ಕೇಂದ್ರಗಳಿಗೆ ದಿಢೀರ್ ಭೇಟಿ ನೀಡಿ ಕರ್ತವ್ಯದಲ್ಲಿದ್ದ ವೈದ್ಯರು ಹಾಗೂ ಸಿಬ್ಬಂದಿಯ ಹಾಜರಾತಿ ಮತ್ತು ಕಾರ್ಯವೈಖರಿಯನ್ನು ಪರಿಶೀಲಿಸಿದರು. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಆರೋಗ್ಯ ವಿಚಾರಿಸಿ, ಅವರಿಗೆ ದೊರೆಯುತ್ತಿರುವ ವೈದ್ಯಕೀಯ ಸೌಲಭ್ಯಗಳ ಕುರಿತು ಮಾಹಿತಿ ಪಡೆದರು.

ಈ ವೇಳೆ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಿ ಜವಾಬ್ದಾರಿಯಿಂದ ಸೇವೆ ಸಲ್ಲಿಸಬೇಕು. ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಬೇಕು ಎಂದು ಸೂಚಿಸಿದರು.

ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಂಬಂಧಪಟ್ಟ ಸಿಬ್ಬಂದಿಗೆ ತಿಳಿಸಿದರು. ಪರಿಶೀಲನೆ ವೇಳೆ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

## ಸಂಪಾದಕೀಯ




# ಮೋದಿಗೆ ರಾಹುಲ್ ಸವಾಲು; ದೂಧ್ ಕಾ ದೂಧ್, ಪಾನಿ ಕಾ ಪಾನಿ ಆಗಿಬಿಡಲಿ!

ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಬಹಿರಂಗ ಚರ್ಚೆಯ ಸವಾಲು ಎಸೆದಿದ್ದಾರೆ. ವಿದೇಶಿ ಪ್ರಭಾವ, ಅದಾನಿ ಪ್ರಕರಣ, ವೋಟ್ ಚೋರಿ, ಎಪ್ಸ್ಟೀನ್ ಫೈಲ್ಸ್ ಸೇರಿದಂತೆ ಗಂಭೀರ ವಿಚಾರಗಳನ್ನು ಚರ್ಚೆಗೆ ಎಳೆದಿದ್ದಾರೆ. ಸರ್ಕಾರ ಉತ್ತರಿಸಬೇಕೆಂದು ಆಗ್ರಹಿಸಿದ್ದಾರೆ. ಬಿಜೆಪಿಯೂ ಸವಾಲು ಸ್ವೀಕರಿಸಿ ತೊಡೆ ತಟ್ಟಿದೆ. ಈಗ ಒಪ್ಪಿಕೊಂಡಂತೆ ಆರೋಪ-ಪ್ರತ್ಯಾರೋಪಗಳ ನೇರ ಚರ್ಚೆಗೆ ಬಿಜೆಪಿ ಸಿದ್ಧವಾಗಬೇಕು. ವಿಪಕ್ಷಗಳ ಒತ್ತಡಕ್ಕಷ್ಟೇ ಅಲ್ಲ, ಸ್ವತಃ ಬಿಜೆಪಿಗೂ ಇದು ಒಳ್ಳೆಯ ಅವಕಾಶ.

ಒಂದೂವರೆ ದಶಕದಿಂದ ಹತಾಶೆಯಲ್ಲಿದ್ದವರು ಈಗ ಹೊರಬಂದಿದ್ದಾರೆ. ವಿದೇಶಗಳಲ್ಲಿ ಯಾರ್ಯಾರನ್ನ ಗುಪ್ತವಾಗಿ ಭೇಟಿಯಾಗುತ್ತಿದ್ದಾರೆ? ಭಾರತದ ವಿರೋಧಿ ಶಕ್ತಿಗಳು ಯಾರನ್ನು ಬೆಂಬಲಿಸುತ್ತಿವೆ? ಭಾರತದ ಶತೃಗಳ ಭಾಷೆಯಲ್ಲಿ ಯಾರು ಮಾತನಾಡುತ್ತಿದ್ದಾರೆ? ಎಂಬುದನ್ನ ನಾವು ಗುರುತಿಸಬೇಕಿದೆ ಎಂದು ಅದೇ ಹಳೇ ಆರೋಪವೊಂದನ್ನು ಮಾಡುತ್ತಾ ಮೋದಿ ಗುಜರಾತಿನ ನೆಲದಲ್ಲಿ ನಿಂತು. ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಅಬ್ಬರಿಸಿದ್ದಾರೆ.

ಈ ಆರೋಪಕ್ಕೆ ತಿರುಗೇಟು ನೀಡಿದ ರಾಹುಲ್ ಗಾಂಧಿ, ವಿದೇಶಿ ಸಹಾಯದಿಂದಲೇ ನೀವು ಪ್ರಧಾನಿಯಾಗಿದ್ದೀರಿ, ಅದರಿಂದಲೇ ಮುಂದುವರೆದಿದ್ದೀರಿ, ನಿಮ್ಮ ಆರ್ಥಿಕ ವ್ಯವಸ್ಥೆಯೇ ವಿದೇಶಿ ನಿಯಂತ್ರಣದಲ್ಲಿದೆ. ಈ ಕುರಿತ ಬಹಿರಂಗ ಚರ್ಚೆಗೆ ಆಹ್ವಾನಿಸುತ್ತೇನೆ. ಯಾವುದೇ ವೇದಿಕೆ, ಯಾವುದೇ ಸಮಯದಲ್ಲಾದರೂ ಬರಲು ಸಿದ್ಧ. ಬೇಕಿದ್ದರೆ ನಿಮ್ಮವರೇ ಆದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನೇ ತೀರ್ಪುಗಾರರನ್ನಾಗಿ ಕೂರಿಸಿ, ಆದರೆ ಚರ್ಚೆಗೆ ಬರುವುದರಿಂದ ತಪ್ಪಿಸಿಕೊಳ್ಳಬೇಡಿ ಎಂದು ಸವಾಲೆಸೆದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ವೋಟ್ ಚೋರಿ ಆರೋಪಗಳಿಗೆ ಉತ್ತರಿಸುವ ಧೈರ್ಯವಿದ್ದರೆ, ರಾಹುಲ್ ಅವರ ಸವಾಲನ್ನು ಸ್ವೀಕರಿಸಲಿ ಎಂದು ಗುಡುಗಿದ್ದಾರೆ. ಭಾರತದ ಹಿತಾಸಕ್ತಿಗಳನ್ನು ವಿದೇಶಿ ಶಕ್ತಿಗಳ ಮುಂದೆ ಅಡಮಾನವಿಟ್ಟಿರುವ ಆರೋಪಗಳಿಗೂ, ಮತಗಳ್ಳತನದ ಆರೋಪಗಳಿಗೂ ಮೋದಿ ಬಳಿ ಉತ್ತರವಿಲ್ಲ ಎಂದು ಟೀಕಿಸಿದ್ದಾರೆ. ಹೀಗೆ ರಾಹುಲ್ ಗಾಂಧಿ, ಖರ್ಗೆ ಸವಾಲೆಸೆದಿದ್ದೇ ತಡ, ನಿರ್ಮಲಾ ಸೀತಾರಾಮನ್, ಅಮಿತ್ ಶಾ, ಪಿಯೂಶ್ ಗೋಯಲ್, ರೇಖಾ ಗುಪ್ತ ಸೇರಿದಂತೆ ಬಿಜೆಪಿ ನಾಯಕರು ಒಂದೇ ಸಮನೆ ತಿರುಗಿಬಿದ್ದರು. ಚರ್ಚೆ ನಡೆಸಲೆಂದೇ ಸಂಸತ್ತಿನ ಅಧಿವೇಶನ ಎನ್ನುವುದು ಇದೆಯಲ್ಲವೇ ಎಂದು ಹೇಳುತ್ತ, ಅಧಿವೇಶನ ನಡೆಯುವ ಬಹುಪಾಲು ಅವಧಿಯಲ್ಲಿ ವಿದೇಶಿ ಪ್ರವಾಸದಲ್ಲಿ ನಿರತರಾಗುವ ಮೋದಿಯವರ ಪರವಾಗಿ ಬ್ಯಾಟ್ ಬೀಸಿದ್ದಾರೆ.

ರಾಜಕೀಯದಲ್ಲಿ ಸವಾಲು-ಪ್ರತಿಸವಾಲುಗಳೇನೂ ಹೊಸದಲ್ಲ. ವಾಕ್ಸಮರಗಳು ಕಾವೇರಿದಂತೆ, ನಾಯಕರು ಬಹಿರಂಗ ಚರ್ಚೆಗೆ ಆಹ್ವಾನ ನೀಡುವುದು ಸಾಮಾನ್ಯ. ಆದರೆ ಯಾರು ಸವಾಲೆಸೆದರು? ಯಾವುದರ ಬಗ್ಗೆ ಪ್ರಶ್ನಿಸಿದರು? ಯಾರು ಸವಾಲು ಸ್ವೀಕರಿಸಿದರು? ಯಾರು ಸವಾಲಿಗೆ ಜವಾಬು ಕೊಟ್ಟರು? ಕೊಟ್ಟ ಜವಾಬು ಸಮರ್ಥನೀಯವೇ ಎಂಬುದಷ್ಟೇ ಮುಖ್ಯ. ಈಗ ಬಿಜೆಪಿ ಮುಂದಿರುವ ಸವಾಲು ಇದೇ ಸ್ವರೂಪದ್ದು. ಆರೋಪಿಸಿ ಸುಮ್ಮನಾದ ಮೋದಿಯವರನ್ನು ರಕ್ಷಿಸಲು ಹೆಣಗಾಡುವುದ ಬಿಟ್ಟು ಮೋದಿಯವರನ್ನೂ ಸೇರಿಸಿಕೊಂಡು ಚರ್ಚೆಗೆ ಬಂದು ಕೂರಬೇಕು. ಸತ್ಯ ಯಾವುದು, ಸುಳ್ಳು ಯಾವುದು ಎಂಬುದನ್ನು ಹೊರಗೆಡಬೇಕು. ತಪ್ಪು ಮಾಡಿದವರು ಯಾರು ಎಂಬುದನ್ನು ಸಾಕ್ಷ್ಯಾಧಾರಗಳ ಮೂಲಕ ಸ್ಪಷ್ಟಪಡಿಸಬೇಕು.

ದೇಶದ ಅತ್ಯುನ್ನತ ಹುದ್ದೆಯಲ್ಲಿರುವ ಪ್ರಧಾನಿಯವರು ರಾಜಕೀಯ ಎದುರಾಳಿಗಳ ಮೇಲೆ ದೇಶದ್ರೋಹದಂತಹ ಗಂಭೀರ ಆರೋಪಗಳನ್ನು ಹೊರಿಸುವುದು ಹೊಣೆಗಾರಿಕೆಯ ರಾಜಕಾರಣವೇ? ಜವಾಬ್ದಾರಿಯುತ ಸರ್ಕಾರದ ನಡೆ ಹೇಗಿರಬೇಕು? ವಿಪಕ್ಷಗಳು ನಿಜಕ್ಕೂ ದೇಶದ ಹಿತಾಸಕ್ತಿಗೆ ದ್ರೋಹ ಬಗೆದಿದ್ದರೆ, ಅವರ ಸವಾಲನ್ನು ಎದುರಿಸಿ ಸತ್ಯವನ್ನು ಜಗಜ್ಜಾಹೀರು ಮಾಡುವುದು ನೈತಿಕ ಕರ್ತವ್ಯವಲ್ಲವೇ? ಆದರೆ, ಇಲ್ಲಿ ಬಿಜೆಪಿ ಆಪಾದನೆಗಳನ್ನಷ್ಟೇ ಮಾಡಿ ಸುಮ್ಮನಾಗುತ್ತಿದೆ, ಮುಖಾಮುಖಿಯಾಗಲು ಹಿಂಜರಿಯುತ್ತಿದೆ. ಅಲ್ಲದೆ, ರಾಹುಲ್ ಮೋದಿ ಎಂದಿರಬೇಕಾದ ಜಟಾಪಟಿ, ರಾಹುಲ್ ಬಿಜೆಪಿ ನಾಯಕರು, ರಾಹುಲ್ ಆರ್‌ಎಸ್‌ಎಸ್ ಎನ್ನುವಂತಾಗಿದೆ. ಮೋದಿಯವರನ್ನು ಪ್ರಶ್ನಿಸಿದರೆ ಅಮಿತ್ ಶಾ ಉತ್ತರಿಸುತ್ತಾರೆ. ಆರ್‌ಎಸ್‌ಎಸ್ ಅಜೆಂಡಾಗಳ ವಿರುದ್ಧ ಆರೋಪಿಸಿದರೆ, ಬಿಜೆಪಿ ನಾಯಕರು ಉತ್ತರಿಸುತ್ತಾರೆ.

ಇನ್ನೊಂದೆಡೆ, ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷಗಳನ್ನು ಮತ್ತು ರಾಹುಲ್ ಗಾಂಧಿ ಅವರನ್ನು ಟೀಕಿಸುವುದನ್ನೇ ನಿತ್ಯದ ಪರಿಪಾಠ ಮಾಡಿಕೊಂಡಂತೆ ಕಾಣುತ್ತಿದೆ. ಮಹತ್ವದ ವಿಶ್ವ ಶೃಂಗಸಭೆಯೊಂದರ ವೇದಿಕೆಯಲ್ಲಿ ನಿಂತು ದೇಶದ ಅಭಿವೃದ್ಧಿ ಹಾಗೂ ಭವಿಷ್ಯದ ಬಗ್ಗೆ ಮಾತನಾಡಬೇಕಿದ್ದವರು, ವಿಪಕ್ಷವನ್ನು ಟೀಕಿಸುವುದರಲ್ಲೇ ಅರ್ಧ ಭಾಷಣ ಮುಗಿಸಿದ್ದಾರೆ. ಜಾಗತಿಕ ವೇದಿಕೆಯಲ್ಲಿ ನಿಂತು ವಿಪಕ್ಷವನ್ನು ಹೀಗೆ ನಿರಂತರವಾಗಿ ದೂರುವುದು, ದೇಶದಲ್ಲಿ ನಡೆಯುವ ಎಲ್ಲ ಅನಾಹುತಗಳಿಗೂ ವಿಪಕ್ಷ ನಾಯಕನೇ ಕಾರಣ ಎಂಬಂತೆ ಬಿಂಬಿಸುವುದು ವಿಶ್ವಗುರು ಎನಿಸಿಕೊಳ್ಳುವ ನಾಯಕನಿಗೆ ಶೋಭಿಸುವುದಿಲ್ಲ. ಒಂದೊಮ್ಮೆ ಕೌನ್ ರಾಹುಲ್? ಎಂದು ಹೀಯಾಳಿಸುತ್ತಿದ್ದವರು, ಇಂದು ಹೋದಲ್ಲಿ-ಬಂದಲ್ಲಿ ರಾಹುಲ್ ಗಾಂಧಿ ಹೆಸರನ್ನೇ ಜಪಿಸುತ್ತಿರುವುದು ಅವರ ಆತಂಕವನ್ನು ತೆರೆದಿಡುತ್ತಿದೆ. ಇಲ್ಲಿ ತೋರುವ ಬದ್ಧತೆಯನ್ನು ವಿಪಕ್ಷಗಳ ಮೇಲೆ ಆರೋಪ ಹೊರಿಸಿ, ಅದನ್ನು ಸಾಬೀತುಪಡಿಸುವಲ್ಲಿಯೂ ತೋರಬೇಕು.

ಒಂದು ವೇಳೆ ತಾವು ನುಣುಚಿಕೊಳ್ಳುತ್ತಿಲ್ಲ ಎಂದಾದರೆ, ರಾಹುಲ್ ಗಾಂಧಿ ಎಸೆದಿರುವ ಬಹಿರಂಗ ಚರ್ಚೆಯ ಸವಾಲನ್ನು ಬಿಜೆಪಿ ಮತ್ತು ಪ್ರಧಾನಿಯವರು ಪೂರ್ಣಮನಸ್ಸಿನಿಂದ ಸ್ವೀಕರಿಸಬೇಕು. ನೇರ ಚರ್ಚೆಯ ಮೇಜಿನ ಬಳಿ ಬಂದು ಕೂತು, ತಾವು ನಿಜಕ್ಕೂ ವಿಶ್ವಗುರು ಎಂಬುದನ್ನು, ವಿಪಕ್ಷಗಳು ದೇಶದ ಹಿತಾಸಕ್ತಿಗೆ ಮಾರಕವಾಗಿವೆ ಎಂಬುದನ್ನು ಮತ್ತು ತಮ್ಮ ಮೇಲಿನ ಸಕಲ ಆರೋಪಗಳೂ ಆಧಾರರಹಿತ ಪಿತೂರಿಗಳು ಎಂಬುದನ್ನು ಸಾಕ್ಷ್ಯ ಸಮೇತ ಸಾಬೀತುಪಡಿಸಿ ತೋರಿಸಲಿ! ಅಮೆರಿಕದೊಂದಿಗಿನ ದ್ವಿಪಕ್ಷೀಯ ರಹಸ್ಯ ಒಪ್ಪಂದಗಳು, ಸಂಪುಟವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಾಏಕಿ ಕೈಗೊಂಡ ನಿರ್ಧಾರಗಳು, ಅದಾನಿ ಪ್ರಕರಣದ ತನಿಖೆ ಮುಕ್ತಾಯಗೊಂಡ ಬಗೆ, ಅಮೆರಿಕ ನಾಯಕ ಬಹಿರಂಗವಾಗಿ ಭಾರತವನ್ನು ತನ್ನ ಕೈಯಾಳಿನಂತೆ ನಡೆಸಿಕೊಳ್ಳುವಾಗಲೂ ತಾವು ವಹಿಸಿದ ಮೌನ, ಕುಖ್ಯಾತ ಸ್ತ್ರೀ ಪೀಡಕ ಎಪ್ಸ್ಟೀನನ ಫೈಲ್‌ನಲ್ಲಿ ತಮ್ಮ ಹಾಗೂ ತಮ್ಮ ಪಟಾಲಂ ಸದಸ್ಯರ ಹೆಸರು ತಳುಕು ಹಾಕಿಕೊಂಡಿರುವುದರ ಬಗ್ಗೆ ಮುಕ್ತ ಚರ್ಚೆ ಮಾಡಲಿ.

ವಿರೋಧ ಪಕ್ಷದ ನಾಯಕನ ಮೇಲೆ ನಿರಂತರವಾಗಿ ಮಾನನಷ್ಟ ಮೊಕದ್ದಮೆ ಹೂಡುವ ಬಿಜೆಪಿ ಸರ್ಕಾರವನ್ನು, ಅದೇ ವಿಪಕ್ಷದಿಂದ ಗಂಭೀರ ಪ್ರಶ್ನೆಗಳು ಎದುರಾದಾಗ ಕಿವುಡು ಕಾಡುತ್ತದೆ. ಪ್ರಧಾನಿ ಮೋದಿಯವರು ವಿಪಕ್ಷಗಳ ಮೇಲೆ ಮಾಡುತ್ತಿರುವ ಆರೋಪಗಳಲ್ಲಿ ಹುರುಳಿದ್ದರೆ, ಅದನ್ನು ಸಂಸತ್ತಿನಲ್ಲೋ ಅಥವಾ ಬಹಿರಂಗ ವೇದಿಕೆಯಲ್ಲೋ ಜನರೆದುರು ಬಿಚ್ಚಿಡಲಿ. ಅದೇ ರೀತಿ, ವಿಪಕ್ಷಗಳು ಎತ್ತುತ್ತಿರುವ ಆರ್ಥಿಕ ಹಾಗೂ ಸಾಂವಿಧಾನಿಕ ಪ್ರಶ್ನೆಗಳಿಗೂ ಸರ್ಕಾರ ಉತ್ತರಿಸಲಿ. ಮಾಧ್ಯಮಗಳ ಸಮುಖದಲ್ಲಿ, ದೇಶದ ಯುವಕರ ಎದುರು, ಸ್ವತಃ ಆರೆಸ್ಸೆಸ್ ಮುಖ್ಯಸ್ಥರನ್ನೇ ತೀರ್ಪುಗಾರರನ್ನಾಗಿ ಕೂರಿಸಿ ಚರ್ಚೆ ಮಾಡೋಣ ಎನ್ನುವ ರಾಹುಲ್ ಗಾಂಧಿ ಅವರ ಆಹ್ವಾನವನ್ನು ಅಷ್ಟೇ ಹುರುಪಿನಿಂದ ಸ್ವಾಭಿಮಾನದ ಪ್ರಶ್ನೆಯಾಗಿ ತೆಗೆದುಕೊಳ್ಳಲಿ. ಮೂರು ಬಾರಿ ಪ್ರಧಾನಿಯಾದರೂ ಒಮ್ಮೆಯಾದರೂ ವಿಪಕ್ಷಗಳೊಂದಿಗೆ ಒಂದು ಬಹಿರಂಗ ಸಭೆ ಮಾಡಿಲ್ಲ, ಒಂದಾದರೂ ಮಾಧ್ಯಮಗೋಷ್ಠಿ ಮಾಡಿಲ್ಲ ಎನ್ನುವ ವಿಪಕ್ಷದ ಟೀಕೆಯನ್ನು ಸುಳ್ಳು ಮಾಡಲಿ. ತನ್ನನ್ನು ತಾನು ನೇರವಂತನೆಂದು ಸಾಬೀತುಪಡಿಸಲು ವೇದಿಕೆ ಯಾವುದಾದರೇನು?

ಜನತಂತ್ರ ವ್ಯವಸ್ಥೆಯಲ್ಲಿ ಸವಾಲು ಹಾಕುವುದು ವಿಪಕ್ಷಗಳ ಹಕ್ಕು. ಅದನ್ನು ಎದುರಿಸಿ ಸತ್ಯ ನಿರೂಪಿಸುವುದು ಸರ್ಕಾರದ ಜವಾಬ್ದಾರಿ. ಪ್ರಶ್ನೆಗಳಿಂದ ವಿಮುಖರಾಗುವುದು ದೇಶವಾಸಿಗಳಿಗೆ ಮಾಡುವ ದ್ರೋಹ. ಬರೀ ಅಬ್ಬರದ ಭಾಷಣಗಳಿಂದ, ವಿಪಕ್ಷಗಳನ್ನು ಆಧಾರವಿಲ್ಲದೆ ಟೀಕಿಸುವುದರಿಂದ, ಎದುರಾಳಿಗಳ ಮೇಲೆ ವೃಥಾ ಆರೋಪ ಹೊರಿಸುವುದರಿಂದ ದೇಶ ಮುನ್ನಡೆಯುವುದಿಲ್ಲ. ಬಿಜೆಪಿ ಈಗಲಾದರೂ ರಾಹುಲ್- ಖರ್ಗೆ ಸವಾಲನ್ನು ಒಪ್ಪಿಕೊಂಡು ತಕ್ಕ ಜವಾಬು ನೀಡುವ ಬದ್ಧತೆ ತೋರಲಿ. ಈ ಬಾರಿ ದೂಧ್ ಕಾ ದೂಧ್, ಪಾನಿ ಕಾ ಪಾನಿ ಆಗಿಯೇಬಿಡಲಿ!

# ನುಡಿನಮನ ಕೆವಿಎನ್: ಕನ್ನಡದ ಘನವಿವೇಕ

ಪ್ರಭುತ್ವದ ಭಾಷೆಗಳಾದ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳು ವರ್ತಿಸುವ ಭಿನ್ನ ಬಗೆಗಳನ್ನು ಕೆವಿಎನ್ ಅವರು ವರ್ಗ ನೆಲೆಯ ಹಿನ್ನೆಲೆಯಲ್ಲಿ ನೋಡುತ್ತ ನೀಡುವ ಒಳನೋಟಗಳು ಭಾಷೆ ಮತ್ತು ಸಮಾಜದ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಬೆಳಕಿಂಡಿಯಾಗಿವೆ. ಅವರಿಲ್ಲದ ಈ ಹೊತ್ತಿನಲ್ಲಿ ಅವರ ಚಿಂತನೆ

ಕನ್ನಡ ಅಸ್ಮಿತೆ ಕುರಿತ ಚಿಂತನೆಯಲ್ಲಿ ಸಮಗ್ರ ಎನಿಸುವಂತಹ ಚಿಂತನೆಗಳಿಗೆ ಹತ್ತಿರವಾಗಿರುವುವು ಕೆವಿಎನ್ (ಕೆ.ವಿ.ನಾರಾಯಣ) ಅವರ ಚಿಂತನೆಗಳು ಎನ್ನಬಹುದು. ಯಾವ ಸಿದ್ಧಾಂತಕ್ಕೂ ತಮ್ಮನ್ನು ತೆತ್ತುಕೊಳ್ಳದೆ, ಆದರೆ ಎಲ್ಲಾ ಸಿದ್ಧಾಂತಗಳ ಬೆಳಕಿನಲ್ಲಿ ಭಾಷೆಯನ್ನು ನೋಡುತ್ತ, ಮುಗ್ಧ ಕುತೂಹಲದ ದೃಷ್ಟಿಯಲ್ಲಿ ಅದು ಭೂತದಿಂದ ನಡೆದು ಬಂದ ಸಾವಿರಾರು ವರ್ಷಗಳ ಹೆಜ್ಜೆಯ ಜಾಡನ್ನು ಪರೀಕ್ಷಿಸುತ್ತ, ಈ ಹೆಜ್ಜೆಯ ಜಾಡನ್ನು ಪ್ರಭಾವಿಸಿರಬಹುದಾದ ರಾಜಸತ್ತೆ, ಹಾದಿಯ ಉಬ್ಬುತಗ್ಗುಗಳನ್ನು ಉಂಟು ಮಾಡಿದ ಜನಬದುಕಿನ ಏರಿಳಿತದ ಭಾರದ ಲಯ, ಹಾದಿಯಲ್ಲಿ ಜೊತೆಯಾದ ಸಹಭಾಷೆಗಳ ಯಜಮಾನಿಕೆ ಮೂಡಿಸಿದ ತನ್ನತನದ ಎಚ್ಚರ, ಸಹಭಾಷೆಗಳ ದೈನ್ಯತೆ ಮೂಡಿಸಿದ ಗರ್ವ ಎಲ್ಲವನ್ನೂ ಅರಿಯಬಲ್ಲರು. ಈ ಅರಿಯುವ ಪಯಣ ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ವಿದ್ಯಮಾನಗಳ ಜತೆ ಜತೆಗೆ ತುಲನೆ ಮಾಡುತ್ತ ಸಾಗುತ್ತದೆ. ಪಯಣವನ್ನು ಯಶಸ್ವಿಗೊಳಿಸಲು ಭಾಷಾಶಾಸ್ತ್ರ, ಮನಃಶಾಸ್ತ್ರ, ಹೊಸಕಾಲದಲ್ಲಿ ವಿಜ್ಞಾನ ಸಂಶೋಧಿಸಿ ದೃಢಪಡಿಸಿದ ಕಲಿಕೆಯ ಸಾಮರ್ಥ್ಯಗಳೆಲ್ಲ ಬೆಂಗಾವಲಿನಲ್ಲಿರುತ್ತವೆ.

ಜಾನಪದದಿಂದ ಸಿನಿಮಾದವರೆಗೆ, ಆಡುನುಡಿಯಿಂದ ವ್ಯಾಟ್ಸಪ್‌ವರೆಗೆ, ಕರ್ನಾಟಕದಲ್ಲಿದ್ದೂ ಕನ್ನಡ ಮರೆಯುವವರಿಂದ, ಕೆನಡಾದಲ್ಲಿದ್ದೂ ಕನ್ನಡ ಮರೆಯದವರವರೆಗೆ, ಕನ್ನಡದ ಉದ್ಧಾರಕ್ಕೆಂದು ಆರಿಸಲ್ಪಟ್ಟ ಸರ್ಕಾರಗಳು ನಡೆಸುತ್ತಿರುವ ಭಾಷಾನಾಶದಿಂದ, ಕನ್ನಡವನ್ನು ನಾಶ ಮಾಡಲೆಂದೇ ಬಂದಿರುವುವೆಂದು ತಿಳಿಯಲಾದ ಜಾಗತಿಕ ಕಂಪನಿಗಳು ಲಾಭಕ್ಕೋ, ಇನ್ನೇನಕ್ಕೋ ಕನ್ನಡ ಬೆಳೆಸುತ್ತಿರುವವರೆಗೆ, ಹೀಗೆ ದಶದಿಕ್ಕುಗಳ ಆಯಾಮದಲ್ಲಿ, ಎಲ್ಲಾ ನಾಶವಾಗುತ್ತದೆ ಎನ್ನುವ ನಿರಾಶಾವಾದ, ಏನೂ ಆಗುವುದಿಲ್ಲವೆಂಬ ಸಿನಿಕತನ, ದೀರ್ಘ ಇತಿಹಾಸದ ಕಾರಣಕ್ಕೆ ಮೂಡುವ ಹುಸಿ ವಿಶ್ವಾಸಗಳೆಲ್ಲದರಿಂದ ಬಿಡುಗಡೆ ಪಡೆದ ಘನವಿವೇಕದ ಕನ್ನಡ ಅಸ್ಮಿತೆಯ ಚಿಂತನೆ ಕೆವಿಎನ್ ಅವರದ್ದು.

ಭಾಷೆಗೆ ಸಂಬಂಧಿಸಿದಂತೆ ಕೆವಿಎನ್ ಅವರ ಕೃತಿಗಳು: ಭಾಷೆಯ ಸುತ್ತಮುತ್ತ, ಸಂಪಾದಿತ ಕೃತಿ ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-1:ಭಾಷೆ. ಮತ್ತೆ ಭಾಷೆಯ ಸುತ್ತಮುತ್ತ, ನಮ್ಮೊಡನೆ ನಮ್ಮ ನುಡಿ, ಮತ್ತು ಕನ್ನಡ ಜಗತ್ತು; ಅರ್ಧ ಶತಮಾನ.

ಇಪ್ಪತ್ತನೆಯ ಶತಮಾನದಲ್ಲಿ ಎಲ್ಲಾ ಭಾರತದ ದೇಶಿ ಭಾಷೆಗಳಂತೆ ಕನ್ನಡವನ್ನೂ ಕಂಗೆಡಿಸಿದ್ದು ಬ್ರಿಟಿಷರು ತಮ್ಮೊಂದಿಗೆ ಹೊತ್ತು ತಂದ ಇಂಗ್ಲಿಷ್. ಇದು ಭಾಷಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಉಂಟು ಮಾಡಿದ ತಲ್ಲಣಗಳು ಈಗಲೂ ಬಾಧಿಸುತ್ತಲೇ ಇವೆ. ಇಂಗ್ಲಿಷ್ ಭಾಷೆ ಕರ್ನಾಟಕದ ಪ್ರತಿಯೊಂದು ಕ್ಷೇತ್ರವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದು ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬೆಳೆದು ಬಂದ ಕನ್ನಡವನ್ನು ಸಂಪೂರ್ಣ ನಾಶ ಮಾಡುತ್ತದೆ ಎನ್ನುವುದು ಭಾಷಿಕ ನೆಲೆಯ ತಲ್ಲಣ. ಇಂಗ್ಲಿಷ್ ಮೂಲಕ ದೊರಕುವ ವೈಚಾರಿಕತೆ, ವೈಜ್ಞಾನಿಕತೆ, ವಿಚಾರವಾದ ಇವೆಲ್ಲವೂ ಪರಂಪರೆಯ ಬೇರುಗಳಿಗೆ ಕೊಡಲಿ ಪೆಟ್ಟು ಹಾಕುತ್ತವೆ ಎನ್ನುವುದು ಸಾಂಸ್ಕೃತಿಕ ನೆಲೆಯ ತಲ್ಲಣ. ಸಾಂಸ್ಕೃತಿಕ ತಲ್ಲಣಗಳು ಪರಿಣಾಮದಲ್ಲಿ ಸಮಾಜದಲ್ಲಿ ಪಲ್ಲಟಗಳನ್ನು ತರುತ್ತವೆ ಎನ್ನುವುದು ಸಾಮಾಜಿಕ ನೆಲೆಯ ತಲ್ಲಣ. ಕೊನೆಗೆ ಕನ್ನಡವನ್ನು ಬಿಡದೆ ಇಂಗ್ಲಿಷ್‌ನಿಂದ ಸಿಗುವ ಪ್ರಯೋಜನಗಳನ್ನು ಪಡೆಯುವ ಕನ್ನಡ ಮಾಧ್ಯಮದಿಂದ ಬರುವ ಸಹಜ ಶೈಕ್ಷಣಿಕ ಲಾಭ ಮತ್ತು ಇಂಗ್ಲಿಷ್‌ನಿಂದ ದತ್ತವಾಗುವ ಸಾಮಾಜಿಕ ಪ್ರಗತಿಯ ಅಧಿಕಾರ ಇವೆರಡನ್ನು ಒಟ್ಟಿಗೇ ಬೆರೆಸುವ ನೀತಿಯೊಂದನ್ನು ನಾವೀಗ ರೂಪಿಸಬೇಕಾಗಿದೆ ಎಂಬ ರಾಜಿ ಹೊಂದಾಣಿಕೆಯ ಸೂತ್ರಕ್ಕೆ ಸಮಾಜ ಶರಣಾಗುತ್ತಿದೆ. ಆದರೆ ನಮ್ಮ ಎಲ್ಲಾ ತಲ್ಲಣಗಳಿಗೆ ನಿಜಕ್ಕೂ ಇಂಗ್ಲಿಷ್ ಎಷ್ಟರಮಟ್ಟಿಗೆ ಕಾರಣವಾಗಿದೆ ಎನ್ನುವುದನ್ನು ಅರಿಯಲು ಹಲವು ಆಯಾಮಗಳ ಅಧ್ಯಯನ ಮತ್ತು ವಿಶ್ಲೇಷಣೆಯ ಅಗತ್ಯವಿದೆ. ನಮ್ಮ ಸಮಸ್ಯೆ ಇರುವುದು ಭಾಷೆಯಲ್ಲಲ್ಲ. ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಸರಿಯಾಗಿ ಗ್ರಹಿಸದ ನಮ್ಮ ಸ್ಥಿತಿಯಿಂದಾಗಿ ತಕ್ಕ ಪರಿಹಾರೋಪಾಯಗಳನ್ನು ರೂಪಿಸಲಾಗುತ್ತಿಲ್ಲ. ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಸರಿಯಾಗಿ ಗ್ರಹಿಸದೆ ಯಾವುದೇ ಒಂದು ಭಾಷೆಯನ್ನು ಆತಂಕದಿಂದ ನೋಡುವುದು ತಪ್ಪು ನಿರ್ಧಾರಗಳಿಗೆ ಮತ್ತು ಅನಗತ್ಯ ಭಯಕ್ಕೆ ಕಾರಣವಾಗುತ್ತದೆ ಎನ್ನುವುದು ಕೆವಿಎನ್ ಅವರ ಚಿಂತನೆ.

ಕನ್ನಡದ ಸಂದರ್ಭದಲ್ಲಿ ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ವೈಜ್ಞಾನಿಕವಾಗಿ ಅರಿಯಲು ಯತ್ನಿಸಿದವರು ಕೆವಿಎನ್ ಅವರು. ಹಾಗಾಗಿ ಭಾಷಾ ವಿಜ್ಞಾನಿ ಎನ್ನುವ ಪದನಾಮ ನಿಜ ಅರ್ಥದಲ್ಲಿ ಅನ್ವರ್ಥವಾಗುವುದು ಇವರ ಸಂದರ್ಭದಲ್ಲಿಯೇ.

ಕನ್ನಡದೊಂದಿಗಿನ ಇಂಗ್ಲಿಷ್ ಸಂಬಂಧ ಕುರಿತ ಕೆವಿಎನ್ ಅವರ ಗ್ರಹಿಕೆಗಳು ಇಂಗ್ಲಿಷ್ ಕುರಿತ ನಮ್ಮ ಹಲವು ಆತಂಕಗಳನ್ನು ದೂರ ಮಾಡುವಂತಿವೆ. ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಮಾಧ್ಯಮದ ಕುರಿತು ಪರ-ವಿರೋಧದ ಚರ್ಚೆಗಳು ಇನ್ನೂ ಬಿರುಸಾಗಿ ನಡೆಯುತ್ತಲೇ ಇವೆ. ಇಂಗ್ಲಿಷ್ ಮಾಧ್ಯಮದ ಪರ ವಾದಿಸುವವರು ಜಾಗತೀಕರಣದಿಂದಾಗಿ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಇಂಗ್ಲಿಷ್ ಅನಿವಾರ್ಯವಾಗಿದೆ. ತಾಂತ್ರಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಶಿಕ್ಷಣ ಇಂಗ್ಲಿಷ್ ಮಾಧ್ಯಮದಲ್ಲಿಯೇ ಇದ್ದು ಈ ಕ್ಷೇತ್ರಗಳನ್ನು ಪ್ರವೇಶಿಸಲು ಪ್ರಾಥಮಿಕ ಹಂತದಿಂದಲೇ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಸುಲಭ ಎನ್ನುತ್ತಾರೆ. ಮಗು ತನ್ನ ಮಾತೃಭಾಷೆಯಲ್ಲಿ ಮಾತ್ರ ವಿಷಯಗಳನ್ನು ಗ್ರಹಿಸಬಲ್ಲುದು, ಇನ್ನೊಂದು ಪರಕೀಯ ಭಾಷೆ ಅದಕ್ಕೆ ಹೊರೆಯಾಗುತ್ತದೆ ಎನ್ನುವುದು ಸಾಮಾನ್ಯವಾಗಿ ಇಂಗ್ಲಿಷ್ ಮಾಧ್ಯಮವನ್ನು ವಿರೋಧಿಸುವವರ ವಾದವಾಗಿದೆ. ಇದರೊಂದಿಗೆ ಇಂಗ್ಲಿಷ್ ಮಾಧ್ಯಮವನ್ನು ವಿರೋಧಿಸುವವರು ಪ್ರಾಥಮಿಕ ಹಂತದಲ್ಲಿ ಮಗುವಿನ ಭಾಷಾ ಕಲಿಕೆ ಮತ್ತು ವಿಷಯ ಕಲಿಕೆಗಳನ್ನು ಒಟ್ಟೊಟ್ಟಿಗೆ ಮಾಡಬೇಕಾಗುತ್ತದೆ; ಇದು ಶ್ರಮದಾಯಕ ಎನ್ನುತ್ತಾರೆ. ಈ ಮಾತನ್ನು ಸಮರ್ಥಿಸಲು ಆಧಾರಗಳಿಲ್ಲ ಎನ್ನುವ ಕೆವಿಎನ್ ಅವರು ಇದಕ್ಕೆ ನೀಡುವ ವಿಶ್ಲೇಷಣೆಗಳು ತರ್ಕಬದ್ಧವಾಗಿವೆ. ಮಗುವಿಗೆ ಒಂದೇ ಸಮಯಕ್ಕೆ ಒಂದಕ್ಕಿಂತ ಹೆಚ್ಚು ಭಾಷೆಗಳ ಪರಿಸರ ದೊರೆತರೆ ಮಗು ತನ್ನ ಅಂತಸ್ಥ ಸಾಮರ್ಥ್ಯದಿಂದ ಹಲವು ಭಾಷೆಗಳನ್ನು ಕಲಿಯಬಹುದು. ಇದು ವೈಜ್ಞಾನಿಕವಾಗಿ ಸಾಬೀತಾಗಿರುವ ಸಂಗತಿ. ಈ ಹಿನ್ನೆಲೆಯಲ್ಲಿ ಮಕ್ಕಳು ಇಂಗ್ಲಿಷ್ ಭಾಷೆಯನ್ನು ಅಥವಾ ಇನ್ನಾವುದೋ ಭಾಷೆಯನ್ನು ಕಲಿಯಲು ಕಷ್ಟವಾಗುತ್ತದೆ ಎಂದು ವಾದಿಸುವುದು ತರ್ಕಹೀನ ಎನ್ನುವುದು ಅವರ ಅಭಿಮತ.

ಮಗುವಿನ ಭಾಷಾ ಕಲಿಕೆ ಮತ್ತು ವಿಷಯ ಕಲಿಕೆಗಳು ಬೇರೆ ಬೇರೆ ರೀತಿಯಲ್ಲಿ ನಡೆದಿರುವ ಕಲಿಕೆಗಳು. ವಿಷಯಗಳ ಕಲಿಕೆಗೆ ಅನುಗಮನ ತಾರ್ಕಿಕತೆ ಹೆಚ್ಚಾಗಿ ಬೇಕಾದರೆ, ಭಾಷೆಯ ಕಲಿಕೆಗೆ ನಿಗಮನ ತರ್ಕವನ್ನು ಬಳಸಲಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ಕಲಿಕೆಯ ಯಶಸ್ಸು ಅದು ಪರಿಚಿತ ಭಾಷೆಯೋ ಅಪರಿಚಿತ



ಭಾಷೆಯೋ ಎಂಬ ಅಂಶವನ್ನು ಅವಲಂಬಿಸುವುದಿಲ್ಲ. ಕಲಿಯುವವರು ಇಂಗ್ಲಿಷ್ ಭಾಷೆಯನ್ನು ಕಲಿಯುತ್ತಿರುತ್ತಾರೆ. ಈ ಜೋಡಿ ಪ್ರಕ್ರಿಯೆಯಲ್ಲಿ ಒಂದು ಇನ್ನೊಂದನ್ನು ನೇತ್ಯಾತ್ಮಕವಾಗಿ ಪ್ರಭಾವಿಸುತ್ತದೆ ಎಂದು ವಾದಿಸಲು ಪುರಾವೆ ಇಲ್ಲ. ಆದ್ದರಿಂದ ಇಂಗ್ಲಿಷ್ ಮಾಧ್ಯಮದ ಸಾಮಾಜಿಕ ನೆಲೆಯ ಮೌಲ್ಯಭಾರವನ್ನು ಯಥಾವತ್ತಾಗಿ ನಾವು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸಲಾರೆವು ಈ ಹಿನ್ನೆಲೆಯಲ್ಲಿ ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳು, ಅಲ್ಲಿಂದ ಕಲಿತು ಹೊರಬರುತ್ತಿರುವ ಮಕ್ಕಳನ್ನು ನೋಡಿ ಕನ್ನಡದ ಭವಿಷ್ಯದ ಬಗ್ಗೆ ಮೂಡುವ ಆತಂಕ ಅಷ್ಟು ವಾಸ್ತವದ್ದಲ್ಲವೆಂಬುದು ಕೆವಿಎನ್ ಅವರ ವಿಶ್ಲೇಷಣೆ.

ಸಹಜವಾಗಿ ಹಲವು ಭಾಷೆಗಳನ್ನು ಕಲಿಯುವ ವಾತಾವರಣದಲ್ಲಿರುವ ಮಕ್ಕಳ ಪರಿಸ್ಥಿತಿಗೂ ಒತ್ತಾಯಪೂರ್ವಕವಾಗಿ ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳಲಾದ ಮಕ್ಕಳಿಗೂ ವ್ಯತ್ಯಾಸವಿದೆ. ಇದು ಪ್ರಜ್ಞಾವಂತ ಸಮಾಜದ ತಳಮಳಕ್ಕೆ ಕಾರಣವಾಗಿದೆ. ಆದರೆ ನಮ್ಮ ತಳಮಳಕ್ಕೂ ಹೆಚ್ಚಿನ ಆಧಾರವಿಲ್ಲವೆಂದು ಕೆವಿಎನ್ ಅವರ ಅಭಿಮತ. ಅವರ ಪ್ರಕಾರ ಕನ್ನಡ ಮತ್ತು ಇಂಗ್ಲಿಷುಗಳ ನಡುವೆ ಇರುವ ಈ ಪೈಪೋಟಿಯಲ್ಲಿ ಇಂಗ್ಲಿಷ್ ಹೆಚ್ಚು ಯಶಸ್ಸನ್ನು ಪಡೆದಿದೆ ಎಂದು ನಮಗೆ ತೋರುತ್ತದೆ. ಆದರೆ ಪರಿಸ್ಥಿತಿ ಕೊಂಚ ಭಿನ್ನವಾಗಿಯೇ ಇದೆ. ಕನ್ನಡವನ್ನು ಬಿಟ್ಟುಕೊಟ್ಟು ಒತ್ತಾಯಪೂರ್ವಕವಾಗಿ ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳಲಾದ ವಿದ್ಯಾರ್ಥಿಗಳು ಔಪಚಾರಿಕವಾಗಿ ಮಾತ್ರ ಇಂಗ್ಲಿಷನ್ನು ನಂಬಿದ್ದಾರೆ. ಅನೌಪಚಾರಿಕವಾಗಿ ಅವರು ತಮ್ಮ ಕಲಿಕೆಯ ಮಾಧ್ಯಮವಲ್ಲದ ಕನ್ನಡವನ್ನೇ ಆಶ್ರಯಿಸುತ್ತಾರೆ. ಇದೊಂದು ಅಪರೂಪದ ಗ್ರಹಿಕೆಯಾಗಿದ್ದು, ಮಗುವೊಂದು ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತ ಕನ್ನಡ ಸೇರಿದಂತೆ ಇತರ ವಿಷಯಗಳನ್ನು ಕಲಿಯಬಹುದು ಎನ್ನುವುದು ಸ್ಥಿರಪಟ್ಟರೆ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ಸಾಧ್ಯವಾಗುತ್ತದೆ. ಕೆವಿಎನ್ ಅವರು ಕನ್ನಡದ ಸಾಧ್ಯತೆಗಳನ್ನು ವೈಜ್ಞಾನಿಕವಾದ ರೀತಿಯಲ್ಲಿ ಎಲ್ಲ ನೆಲೆಗಳಲ್ಲಿ ನೋಡುತ್ತಿದ್ದು ಇದು ಕನ್ನಡದ ಚಿಂತನಾ ಪರಂಪರೆಯಲ್ಲಿಯೇ ವಿಶಿಷ್ಟವಾದದ್ದಾಗಿದೆ. ಇಂಗ್ಲಿಷ್ ಮಾಧ್ಯಮ ಸೇರಿದರೂ ಬಹುತೇಕ ವಿದ್ಯಾರ್ಥಿಗಳು ಕನ್ನಡವನ್ನೇ ಆಶ್ರಯಿಸಿದ್ದಾರೆ ಎನ್ನುವುದು ಕನ್ನಡಕ್ಕೆ ಇಂಗ್ಲಿಷ್ ಮಾಧ್ಯಮದ ಭಯವನ್ನು ಹೋಗಲಾಡಿಸುವಂತಿದೆ.

ಕನ್ನಡ ಭಾಷಾ ಸಮುದಾಯ ಇಂಗ್ಲಿಷ್ ಕಲಿಯುವುದು ಔಪಚಾರಿಕ ಶಿಕ್ಷಣದ ಭಾಗವಾಗಿ ಮಾತ್ರ. ಆದರೆ ಅಧಿಕಾರದ ಸಂಬಂಧದಲ್ಲಿ ಇಂಗ್ಲಿಷಿಗೆ ಇರುವ ಒತ್ತಾಸೆಗಳಿಂದಾಗಿ ಕನ್ನಡದ ಜೊತೆಗೆ ಅದು ಯಾಜಮಾನ್ಯದ ನೆಲೆಯನ್ನು ಪಡೆದುಕೊಳ್ಳುತ್ತಿದೆ. ಎಷ್ಟೇ ಭಾಷಿಕ ವ್ಯವಹಾರಗಳು ಈ ಸಂಬಂಧವನ್ನು ಹೊಂದಿದ್ದರೂ ಅವು ಜನರ ಅರಿವಿನ ಭಾಗವಾಗುವುದಿಲ್ಲ ಎನ್ನುವ ಕೆವಿಎನ್ ಅವರ ಗ್ರಹಿಕೆ ಕನ್ನಡದ ಮತ್ತೊಂದು ಭರವಸೆಯಾಗಿದೆ. ಇಂಗ್ಲಿಷ್ ಅಧಿಕಾರದ ಸಂಬಂಧದಲ್ಲಿ ಯಾಜಮಾನ್ಯತೆ ಪಡೆದುಕೊಂಡರೂ, ಕನ್ನಡಿಗರು ಪ್ರವಾಹೋಪಾದಿಯಲ್ಲಿ ಇಂಗ್ಲಿಷಿನ ಹಿಂದೆ ಬಿದ್ದಿದ್ದರೂ ಅವರು ಇಂಗ್ಲಿಷ್ ಕಲಿಯುವುದು ಔಪಚಾರಿಕ ಶಿಕ್ಷಣದ ಭಾಗವಾಗಿ ಮಾತ್ರ. ಇಂಗ್ಲಿಷ್ ಎಷ್ಟೇ ಪ್ರಾಮುಖ್ಯತೆ ಪಡೆದರೂ ಅದು ಕನ್ನಡದಂತೆ ಅರಿವಿನ ಭಾಗವಾಗುವುದಿಲ್ಲ ಎಂಬ ಗ್ರಹಿಕೆ ಮುಖ್ಯವಾದದ್ದು. ಏಕೆಂದರೆ ಇಂಗ್ಲಿಷಿನಿಂದ ಕನ್ನಡಕ್ಕೆ ಎದುರಾಗಿರುವ ದೊಡ್ಡ ಆತಂಕವೆಂದರೆ ಅದು ನಮ್ಮ ಸಂಸ್ಕೃತಿಯನ್ನು ಮರೆಸಿ ಬೇರೊಂದು ಸಂಸ್ಕೃತಿಯನ್ನು ನೆಲೆಯೂರಿಸುತ್ತದೆ ಎನ್ನುವುದು. ಇಂಗ್ಲಿಷ್ ಅರಿವಿನ ಭಾಷೆಯಾಗದಿರುವ ಕಾರಣಕ್ಕೆ ಕನ್ನಡಕ್ಕೆ ಈ ಭಯದಿಂದ ಹೊರಬರುವುದು ಸಾಧ್ಯವಾಗುತ್ತದೆ.

ಮಾತೃಭಾಷೆಯಲ್ಲಿ ಓದಿದವರು ಅದರೊಂದಿಗೆ ತಮ್ಮ ಸಂಸ್ಕೃತಿಯನ್ನೂ ಮೈಗೂಡಿಸಿಕೊಳ್ಳುತ್ತಾರೆ ಮತ್ತು ಕಾಲಾಂತರದಲ್ಲಿ ಅದರ ವಾರಸುದಾರರಾಗುತ್ತಾರೆ ಎನ್ನುವುದು ಸಮಾಜದಲ್ಲಿ ಗಟ್ಟಿಯಾಗಿ ಬೇರುಬಿಟ್ಟ ನಂಬಿಕೆಯಾಗಿದ್ದು, ಈ ಕಾರಣದಿಂದಲೇ ಇಂಗ್ಲಿಷ್ ಮಾಧ್ಯಮ ನಮ್ಮ ಸಂಸ್ಕೃತಿಯನ್ನು ನಾಶ ಮಾಡುತ್ತಿದೆ ಎನ್ನುವ ಆತಂಕವನ್ನು ಸೃಷ್ಟಿಸಿದೆ. ಆದರೆ ಕೆವಿಎನ್ ಅವರ ಚಿಂತನೆ ಇವನ್ನೆಲ್ಲ ಮರುಪರಿಶೀಲಿಸುವಂತೆ ಒತ್ತಾಯಿಸುತ್ತವೆ. ಅವರ ಪ್ರಕಾರ ಕನ್ನಡ ಮಾಧ್ಯಮದಲ್ಲಿ ಓದಿದವರು, ಹಾಗೆ ಓದಿದ್ದರಿಂದಲೇ ಸಂಸ್ಕೃತಿಗೆ ನಿಕಟವಾಗಿರುತ್ತಾರೆ ಮತ್ತು ಅದರ ವಾರಸುದಾರರಾಗಿರುತ್ತಾರೆ ಎಂದು ಸಾಧಿಸುವುದು ಕಷ್ಟ. ಅದಕ್ಕೂ ಪುರಾವೆಗಳಿಲ್ಲ. ಏಕೆಂದರೆ ಇಂಗ್ಲಿಷ್ ಮಾಧ್ಯಮದ ಅವಕಾಶ ಸಿಗದೆ ಕನ್ನಡದಲ್ಲೇ ಕಲಿತ ತಲೆಮಾರೊಂದು ನಮ್ಮೊಡನೆ ಇದೆ. ಅದರಲ್ಲಿಯೂ ಸಾಂಸ್ಕೃತಿಕ ನೆಲೆಯ ಬಂಧ ಬಲವಾಗಿದೆಯೆಂದು ಹೇಳಲು ಸಾಕಷ್ಟು ಕಾರಣಗಳಿಲ್ಲ. ಆದ್ದರಿಂದ ಶಿಕ್ಷಣ ಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆ ಮುಂದುವರಿಕೆಗೂ ನೇರವಾದ ಸಂಬಂಧ ಇದ್ದಿರಲಾರದು. ಸಾಮಾಜಿಕವಾದ ಬೇರೆ ಯಾವುದೋ ಕಾರಣಗಳು ಈ ನೆಲೆಯಲ್ಲಿ ಹೆಚ್ಚು ತೀವ್ರವಾಗಿ, ಪ್ರಭಾವಶಾಲಿಯಾಗಿ ಇರುವಂತೆ ತೋರುತ್ತದೆ. ಮಕ್ಕಳ ಕಲಿಕೆಯ ಜೈವಿಕವಾಗಿಯೇ ಇರುವ ಸಾಮರ್ಥ್ಯದ ಕುರಿತು ವೈಜ್ಞಾನಿಕ ಹಿನ್ನೆಲೆಯಲ್ಲಿನ ಕೆವಿಎನ್ ಅವರ ಗ್ರಹಿಕೆಗಳು ಪ್ರಾಥಮಿಕ ಶಿಕ್ಷಣ ಯಾವ ಭಾಷಾ ಮಾಧ್ಯಮದಲ್ಲಿ ಇರಬೇಕೆಂಬ ಚರ್ಚೆಯ ತಳಹದಿಯನ್ನು ಅಲ್ಲಾಡಿಸುವಂತಿದ್ದು ಮರುಚಿಂತನೆಗೆ ಒತ್ತಾಯಿಸುತ್ತವೆ. ಇವು ಕನ್ನಡ ಅಸ್ಮಿತೆಯ ಸ್ವರೂಪವನ್ನು ಬದಲಿಸುವಷ್ಟು ಶಕ್ತವಾಗಿವೆ.

ಇಂಗ್ಲಿಷ್ ಮಾರುಕಟ್ಟೆಯ ಭಾಷೆಯಾಗಿರುವುದು ಕನ್ನಡಕ್ಕೆ ಹೆಚ್ಚಿನ ಆತಂಕವನ್ನು ತಂದಿರುವುದಾಗಿದೆ. ಪ್ರಧಾನವಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದ ಪ್ರಮುಖ ನಗರಗಳಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳ ಸಕಲ ವಹಿವಾಟುಗಳೂ ಇಂಗ್ಲಿಷಿನಲ್ಲಿ ನಡೆಯುತ್ತ, ಇವೆಲ್ಲ ಇಂಗ್ಲಿಷಿನ ಪ್ರವರ್ತಕರಂತೆ ಕಾರ್ಯನಿರ್ವಹಿಸುತ್ತಿವೆ. ಇವು ತಮ್ಮ ವ್ಯವಹಾರದ ಬೆಳವಿಗೆ ದೇಶೀ ಭಾಷೆ ತೊಡಕೆನಿಸಿದರೆ ಅದನ್ನು ಬಿಟ್ಟುಬಿಡಬೇಕು ಎಂದು ನಿರಾಳವಾಗಿ ನುಡಿಯುತ್ತವೆ. ಅವು ಇಂಗ್ಲಿಷನ್ನು ಅಪ್ಪಿಕೊಳ್ಳುತ್ತಿರುವುದು, ಬಿ. ಎಂ. ಶ್ರೀ ಅಥವಾ ಕುವೆಂಪು ಅವರಂತೆ ಜ್ಞಾನಕ್ಕಲ್ಲ. ಸಾಹಿತ್ಯಕ ಪ್ರೇರಣೆಗೂ ಅಲ್ಲ. ಬದಲಿಗೆ ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ. ಅದೂ ಇಂಗ್ಲಿಷಿನ ಅಪ್ಪುವಿಕೆ ಕನ್ನಡವನ್ನು ಇಟ್ಟುಕೊಂಡಲ್ಲ; ಕನ್ನಡವನ್ನು ಬಿಟ್ಟುಕೊಟ್ಟು.

ಎಲ್ಲವನ್ನೂ ಲಾಭ-ನಷ್ಟಗಳ ಕಣ್ಣಲ್ಲೇ ನೋಡುವ ಅವಕ್ಕೆ ತಮ್ಮ ಈ ಭಾಷಾನೀತಿಯಿಂದ ನಾಡಿನ ವಿಶಾಲ ಸಮುದಾಯಗಳ ಮೇಲೆ ಸಂಭವಿಸುವ ಪರಿಣಾಮದತ್ತ ಖಬರಿಲ್ಲ ಎಂಬ ಅಸಮಾಧಾನ, ಆಕ್ರೋಶಗಳಿಗೂ ಕಾರಣವಾಗಿವೆ. ಅಲ್ಲದೆ ಕರ್ನಾಟಕದ ಪ್ರಸಿದ್ಧ ಕಂಪ್ಯೂಟರ್ ಉದ್ಯಮಿಗಳು ಏನು ಮಾಡಿದ್ದಾರೆ? ಕನ್ನಡದ ಬದಲು ಇಂಗ್ಲಿಷ್ ಮಾಧ್ಯಮದ ಪ್ರಚಾರಕರಾಗಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಕನ್ನಡ ಮಾಧ್ಯಮದೊಂದಿಗೆ ಚೆನ್ನಾಗಿ ಕಲಿಯಿರಿ ಎಂದು ಹೇಳುತ್ತಿಲ್ಲ; ಇಂಗ್ಲಿಷ್ ಮಾಧ್ಯಮದಲ್ಲೇ ಕಲಿಯಿರಿ ಎಂದು ಒತ್ತಾಯಿಸುತ್ತಿದ್ದಾರೆ ಇದರಿಂದ ಕನ್ನಡ ಭಾಷೆಗೆ ಆಪತ್ತು ಬಂದೊದಗಿದೆ ಎನ್ನುವ ಸಿಟ್ಟು ಮಡುಗಟ್ಟಿದೆ.

ಬಂಡವಾಳಶಾಹಿಗಳಿಗೆ ಲಾಭಗಳಿಕೆಯ ಉದ್ದೇಶವಿರುವುದು ಮೇಲ್ನೋಟಕ್ಕೆ ತಿಳಿಯುವಂತಹದು. ಅವುಗಳಿಗೆ ಸಮುದಾಯ ಪ್ರಜ್ಞೆಯಾಗಲೀ, ದೇಶೀ ಭಾಷೆಗಳ ಕುರಿತ ಕಾಳಜಿಯಾಗಲಿ ಇಲ್ಲ. ಹಾಗೆಂದು ಅವುಗಳಿಗೆ ಇಂಗ್ಲೀಶಿನ ಕುರಿತು ಕುರುಡು ವ್ಯಾಮೋಹವೇನೂ ಇಲ್ಲ. ಬಂಡವಾಳಶಾಹಿಗಳಿಗೆ ಪೂರಕವಾಗಿ ಕನ್ನಡ ಭಾಷಿಕರು ಆಧುನೀಕರಣದ ನೆಲೆಯಲ್ಲಿ ಇಂಗ್ಲಿಷಿಗೆ ಮುಖಾಮುಖಿಯಾಗುತ್ತಾರೆ. ಅಂದರೆ ಕನ್ನಡದ ದೊಡ್ಡ ಸಮುದಾಯ ಇಂಗ್ಲಿಷ್ ಜೊತೆ ಗಟ್ಟಿಯಾದ ಸಂಬಂಧವನ್ನು ಬೆಳೆಸಿಕೊಳ್ಳುತ್ತಿದೆ. ಇದು ಮುಖ್ಯವಾಗಿ ಆರ್ಥಿಕ ಮತ್ತು ಆಧುನೀಕರಣದ ಕಾರಣಕ್ಕಾಗಿ.

ಇಂಗ್ಲಿಷ್ ಭಾಷೆ ತನ್ನ ಅಧಿಪತ್ಯವನ್ನು ಏಕಪಕ್ಷೀಯವಾಗಿ ಸಾಧಿಸುತ್ತದೆ ಎನ್ನುವ ಮಾತು ಅಷ್ಟು ಸರಳವಲ್ಲ. ಏಕೆಂದರೆ ಮಾರುಕಟ್ಟೆಯ ಶಕ್ತಿಗಳು ಇಂಗ್ಲಿಷನ್ನು ಅಸ್ತ್ರವಾಗಿ ಬಳಸುತ್ತಿವೆ ಎಂಬುದು ನಿಜ. ಆದರೆ ಕೊಳ್ಳುವ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಮಾರುಕಟ್ಟೆಯ ಶಕ್ತಿಗಳ ಮುಖ್ಯ ಗುರಿಯೇ ಹೊರತು ಇಂಗ್ಲಿಷನ್ನು ಬೆಳೆಸುವುದಲ್ಲ. ಒಂದು ವೇಳೆ ಕೊಳ್ಳುವವರನ್ನು ಓಲೈಸಲು ಅವರ ಭಾಷೆಯನ್ನು ಬಳಸಬೇಕು ಎಂಬ ಪ್ರಸಂಗ ಒದಗಿದರೆ ಆಗ ಇಂಗ್ಲಿಷಿನ ಜೊತೆಗೆ ಈ ಭಾಷೆಯನ್ನು ಬಳಸಲು ಹಿಂಜರಿಯುವುದಿಲ್ಲ ಎಂದು ಕೆವಿಎನ್ ಅವರು ವಿಶ್ಲೇಷಿಸುತ್ತಾರೆ. ಇದಕ್ಕೆ ನಿದರ್ಶನವಾಗಿ ಏಕಪಕ್ಷೀಯವಾಗಿ ಇಂಗ್ಲಿಷನ್ನು ಹೇರುತ್ತಿದ್ದ ಮಾಹಿತಿ ತಂತ್ರಜ್ಞಾನ ವಲಯದ ದೈತ್ಯ ಕಂಪನಿ ಮೈಕ್ರೋಸಾಫ್ಟ್ ಈಗ ಕನ್ನಡವೂ ಸೇರಿದಂತೆ ಜಗತ್ತಿನ ನೂರಾರು ಭಾಷೆಗಳನ್ನು ತನ್ನ ಕಾರ್ಯವಾಹಿಯಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿರುವುದನ್ನು ಉದಾಹರಿಸುತ್ತಾರೆ. ಕೆವಿಎನ್ ಅವರ ಈ ಗ್ರಹಿಕೆಯನ್ನು ಸಮರ್ಥಿಸುವಂತೆ ಇದುವರೆಗೆ ಇಂಗ್ಲಿಷಿನಲ್ಲಷ್ಟೇ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ವೀಕ್ಷಕ ವಿವರಣೆ ನೀಡುತ್ತಿದ್ದ ಸ್ಟಾರ್ ಸ್ಪೋರ್ಟ್ಸ್ ರಾಷ್ಟ್ರೀಯ ಟಿವಿ ಚಾನಲ್ಲು ಈಗ ತಮಿಳು ಹಾಗು ಕನ್ನಡದಲ್ಲಿಯೂ ವೀಕ್ಷಕ ವಿವರಣೆ ನೀಡಲಾರಂಭಿಸಿದೆ.

ಬಹುರಾಷ್ಟ್ರೀಯ ಕಂಪನಿಗಳು ಅಗತ್ಯಬಿದ್ದರೆ ದೇಶಿ ಭಾಷೆಗಳನ್ನು ಬಳಸುತ್ತವೆ ಎನ್ನುವುದು ನಿಜ. ಆದರೆ ಅವು ಬಳಸುವ ದೇಶಿ ಭಾಷೆಯ ಸ್ವರೂಪ ಭಾಷೆಯನ್ನು ವಿರೂಪಗೊಳಿಸುವ ಅಪಾಯಗಳ ಬಗ್ಗೆಯೂ ಕೆವಿಎನ್ ಅವರ ಗಮನವಿದೆ. ಬಹುರಾಷ್ಟ್ರೀಯ ಕಂಪನಿಗಳು ಸೃಷ್ಟಿಸುತ್ತಿರುವ ಉಪಭೋಗಿ ಸಂಸ್ಕೃತಿಗೆ ಕರ್ನಾಟಕದ ಜನಸಮುದಾಯದ ಒಂದು ದೊಡ್ಡ ಭಾಗ ಗುರಿಯಾಗಿದೆ. ಅಂದರೆ ಹೊಸ ಸಾಮಗ್ರಿಗಳನ್ನು ಕೊಂಡು ಬಳಸುವ ಸಾಮರ್ಥ್ಯ ಈ ಜನವರ್ಗಕ್ಕೆ ಇದೆ. ಜಾಗತಿಕ ನೆಲೆಯಿಂದ ಗಮನಿಸಿದರೆ ಸುಮಾರು ಮೂರೂವರೆ ಕೋಟಿ ಜನರ ಈ ಗುಂಪು ತುಂಬಾ ಗಣನೀಯವಾದದ್ದು. ಅವರ ಆಸಕ್ತಿಯನ್ನು ಕಾಯ್ದುಕೊಳ್ಳಲು ಮೊದಮೊದಲು ಇಂಗ್ಲಿಷ್ ಬಳಸುತ್ತಿದ್ದ ಈ ಮಾರಾಟಗಾರರು ಗ್ರಾಹಕರು ಬಳಸುವ ದೇಶಿ ಭಾಷೆಗಳ ಕಡೆ ಒಲವು ತೋರಿಸಿದ್ದಾರೆ. ಅವರು ರೂಪಿಸುತ್ತಿರುವ ಕನ್ನಡವು ಕೂಡಾ ಹೀಗೆ ಅವರ ಅಪೇಕ್ಷೆಯ ಕನ್ನಡ. ನಮ್ಮ ಅಗತ್ಯಕ್ಕೆ ನಾವು ರೂಪಿಸಿಕೊಂಡಿಲ್ಲ. ತಂತ್ರಜ್ಞಾನದ ಜಾಲಕ್ಕೆ ಸಿಲುಕಿದ್ದಾಗ ಈ ಬಗೆಯ ಭಾಷಾ ಪ್ರಯೋಗಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಬಿಡುತ್ತದೆ. ಮಾರುಕಟ್ಟೆ ಸಂಸ್ಕೃತಿಯಲ್ಲಿ ಇಂತಹ ತುರ್ತುಗಳು ಸೃಷ್ಟಿಸುವ ಪರಿಹಾರಗಳು ನಮ್ಮ ಕೊರಳಿಗೆ ಗಂಟು ಬೀಳುತ್ತವೆ ಎಂದು ವಿಶ್ಲೇಷಿಸುತ್ತಾರೆ.

ಕೆವಿಎನ್ ಅವರು ಮಂಡಿಸುತ್ತಿರುವ ಮಾರುಕಟ್ಟೆ ಶಕ್ತಿಗಳ ಭಾಷೆಯೊಂದಿಗಿನ ಅನುಕೂಲಸಿಂಧು ಚಲನಶೀಲ ಸಂಬಂಧಗಳ ಕುರಿತ ಗ್ರಹಿಕೆಗಳು, ಸಾಮ್ರಾಜ್ಯಶಾಹಿಗಳು ಮತ್ತು ದೇಶೀಯ ಆಳುವ ವರ್ಗಗಳು ಭಾಷೆಯನ್ನು ರಾಜಕಾರಣದ ಅಸ್ತ್ರವನ್ನಾಗಿ ಬಳಸುತ್ತಿವೆ ಎನ್ನುವ ಕನ್ನಡ ವಿಚಾರ ಸಾಹಿತ್ಯದಲ್ಲಿನ ಗ್ರಹಿಕೆಯಾಚೆಗಿನ ಆಯಾಮಗಳತ್ತ ಬೆಳಕು ಬೀರುತ್ತಿವೆ. ಕಳೆದ 50 ವರ್ಷಗಳಲ್ಲಿ ಕನ್ನಡ ಇಂಗ್ಲಿಷ್ ಜೊತೆಗಿನ ತನ್ನ ಸಂಬಂಧವನ್ನು ಮತ್ತೆ ಮತ್ತೆ ಮರುವ್ಯಾಖ್ಯಾನಗೊಳ್ಳುತ್ತ ಬಂದಿದೆ. ಏಕೀಕರಣದ ಮೊದಲ ಕೆಲವು ವರ್ಷಗಳಲ್ಲಿ ಇಂಗ್ಲಿಷನ್ನು ನಾವು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾದ ಸಾಧ್ಯತೆ ಎಂದು ಭಾವಿಸಿದ್ದೆವು. ಅದು ಸ್ವಯಂಚಾಲಿತ ಸಾಮರ್ಥ್ಯವುಳ್ಳ ಭಾಷೆ ಎಂದು ನಾವು ಒಪ್ಪಲಿಲ್ಲ. ಇಂಗ್ಲಿಷನ್ನು ಗೆಲ್ಲಬಹುದು ಎಂಬ ಹುಮ್ಮಸ್ಸಿನಲ್ಲಿ ನಾವು ಮುಂದಾದೆವು ಎಂದು ತೋರುತ್ತದೆ. ಆನಂತರದ ದಿನಮಾನಗಳು ಆ ಇಂಗ್ಲಿಷಿಗೆ ಇರುವ ಸ್ವಯಂಚಾಲಿತ ಸಾಮರ್ಥ್ಯದ ಅರಿವನ್ನು ನಮಗೆ ಮಾಡಿಕೊಟ್ಟಿದೆ. ಇಲ್ಲಿ ಇಂಗ್ಲಿಷಿಗೆ ದಕ್ಕಿದ ಈ ಸ್ವಯಂಚಾಲಿತ ಸಾಮರ್ಥ್ಯಕ್ಕೆ ಕಾರಣವಾಗಿರುವ ಇಂಧನ ಮೂಲಗಳು ಈಗಾಗಲೇ ಗುರುತಿಸಲಾಗಿರುವಂತೆ ಈ ಭಾಷೆ ಮೂಲಕ ಸಮಾಜದ ಕೆಲವರ್ಗಗಳಿಗೆ ಸಿಗುತ್ತಿರುವ ಆರ್ಥಿಕ ಭದ್ರತೆ, ಪ್ರತಿಷ್ಠೆ, ಆಧುನಿಕರಣಗೊಳ್ಳುವ ಬಯಕೆಗಳೇ ಆಗಿವೆ. ಕೆವಿಎನ್ ಅವರ ಈ ಗ್ರಹಿಕೆಯೂ ಅಂತಹದ್ದೊಂದು ಆಯಾಮ. ಬಹುಷಃ ಇದುವೇ ಕೆವಿಎನ್ ಅವರು ಭಾಷೆಯ ರಾಜಕಾರಣದ ಹಿಂದಿರುವ ವಂಚನೆಗಳನ್ನು, ಅಂದರೆ ಪ್ರಭುತ್ವಗಳು ಜನರಿಗೆ ವಂಚಿಸುತ್ತಿರುವುದನ್ನು ತಮ್ಮ ಒಟ್ಟು ಅಧ್ಯಯನದ ಸಂದರ್ಭದಲ್ಲಿ ನವಿರುಗೊಳಿಸಿ ಹೇಳುವುದೇಕೆ? ಎಂಬ ಪ್ರಶ್ನೆಗೆ ಉತ್ತರವನ್ನೂ ಅಡಗಿಸಿಕೊಂಡಿದೆ ಎನಿಸುತ್ತದೆ.

ಪ್ರಭುತ್ವದ ಭಾಷೆಗಳಾದ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳು ವರ್ತಿಸುವ ಭಿನ್ನ ಬಗೆಗಳನ್ನು ಕೆವಿಎನ್ ಅವರು ವರ್ಗನೆಲೆಯ ಹಿನ್ನೆಲೆಯಲ್ಲಿ ನೋಡುತ್ತ ನೀಡುವ ಒಳನೋಟಗಳು ಭಾಷೆ ಮತ್ತು ಸಮಾಜದ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಬೆಳಕಿಂಡಿಯಾಗಿವೆ. ಬದಲಾದ ಚಾರಿತ್ರಿಕ ಸಂದರ್ಭದಲ್ಲಿ ಸಂಸ್ಕೃತಕ್ಕೆ ಸೇರಿದ ಪಾವಿತ್ರ್ಯದ ನಂಟು ಇಂಗ್ಲಿಷಿಗೆ ಇಲ್ಲ. ಬದಲಿಗೆ ಅದು ಆಧುನಿಕತೆಯ ಚಹರೆಯನ್ನು ಭಾಷಾ ಬಳಕೆದಾರರಿಗೆ ದೊರಕಿಸಿಕೊಡುತ್ತದೆ ಎಂದವರು ವಿಶ್ಲೇಷಿಸುತ್ತಾರೆ. ಇಂಗ್ಲಿಷ್ ಭಾಷೆ ಕನ್ನಡದ ಸಂದರ್ಭದಲ್ಲಿ ಮೊದಮೊದಲು ಕೇವಲ ಆಧುನಿಕತೆಯ ಮತ್ತು ತಿಳಿವಳಿಕೆಯ ಆಕರ ಎಂಬ ನೆಲೆಯನ್ನು ಪಡೆದಿತ್ತು. ಆಧುನಿಕತೆಯ ಸೂಚಕವಾಗಿ ಈ ಭಾಷೆಯನ್ನು ಪರಿಶೀಲಿಸಿದಾಗ ಕನ್ನಡ ಸಂಸ್ಕೃತಿಗೆ ಅಘಾತಕಾರಿಯಾದ ಅಂಶಗಳು ಅಷ್ಟು ಕಂಡು ಬರಲಿಲ್ಲ. ಆದರೆ ತಿಳಿವಳಿಕೆಯ ಆಕರವಾಗುತ್ತಲೇ ಭಾಷೆ ಯಜಮಾನಿಕೆಯ ನೆಲೆಗೂ ತಲುಪುವುದು ಸಾಧ್ಯ ಎಂಬ ಅರಿವು ಏಳನೇ ದಶಕದಿಂದ ಈಚೆಗೆ ಕನ್ನಡ ಜನಮನದಲ್ಲಿ ನೆಲೆಯೂರಲು ಮೊದಲಾಯಿತು. ವಿದ್ಯಾಭ್ಯಾಸ ಮತ್ತು ಇಂಗ್ಲಿಷ್ ಭಾಷೆಯನ್ನು ಸಮಾನವಾಗಿ ನೋಡುತ್ತ ಇದರಿಂದ ನಮ್ಮ ಪಾರಂಪರಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತವೆ ಎಂದು ಸಮಾಜ ನೋಡಲಾರಂಭಿಸಿದ್ದನ್ನು ಈ ಕಾಲಘಟ್ಟದಲ್ಲಿ ಬಂದ ಜನಪ್ರಿಯ ಸಿನಿಮಾಗಳಲ್ಲಿ ಇಂಗ್ಲಿಷ್ ಕಲಿತ ಮಕ್ಕಳು ತಂದೆ ತಾಯಿಗಳನ್ನೂ, ಕೌಟುಂಬಿಕ ಮೌಲ್ಯಗಳನ್ನೂ ತಿರಸ್ಕರಿಸುವ ಉದಾಹರಣೆಯೊಂದಿಗೆ ಕೆವಿಎನ್ ಅವರು ಮಂಡಿಸುವುದು ಪರಿಣಾಮಕಾರಿಯಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR